ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಮೇ -೨೦೧೭ ಸಂಚಿಕೆ - ೧೦

ದಕ್ಷಿಣಾಯನ ಸಮಾವೇಶ; ಒಂದು ಚಿಂತನೆ

*

ಚಂಪಾರಣ್ಯ ಸತ್ಯಾಗ್ರಹದ ಹಿನ್ನಲೆ

*

ಅಂಬೇಡ್ಕರಕ್ಕೈಗೆ ಮರಳಿಬಂದ ಸಂವಿಧಾನ

*

ಸಿದ್ಧ ಗಂಗೆಯ ಸಿದ್ಧಿ ಪುರುಷ

ಜನಪದ ವಿಚಾರದಲ್ಲಿ

ಮೇ - ೨೦೧೬

Layer Lokesh P -- 9964640225

9-1-2018

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೬

ಸಂಪುಟ - ೧೭

ಸಂಚಿಕೆ - ೧೦

ಸಂಪಾದಕ

ಸುರೇಂದ್ರ ಕೌಲಗಿ

ಚಂದಾ ವಿವರ

ವಾರ್ಷಿಕ : ರೂ ೨೦೦/-

ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)

ಮೇಲುಕೋಟೆ - 571431

ಮಂಡ್ಯ ಜಿಲ್ಲೆ

ಫೋನ್ : 9141700812

08236 - 299854

email :

janapada@yahoo.com

Web: janapada.org

ಮರದ ಮನವಿ

ಭೂಮಿ ಮ್ಯಾಗ ಬೆಳೆದು,
ನಾನು ದೊಡ್ಡವನಾಗ್ತೀನಿ;
ಸುತ್ತಮುತ್ತ ಮೈತುಂಬೆಲ್ಲಾ
ಕೊಂಬೆ ಚಾಚ್ತೀನಿ

ಹಕ್ಕಿಗೆಲ್ಲಾ ಗೂಡು ಕಟ್ಟಲು,
ಸೈಟು ಕೊಡ್ತೀನಿ;
ಅಚ್ಚ ಹಸಿರು ಚಿಗುರು ಬೆಳೆಸಿ,
ಉಸಿರು ನೀಡ್ತೀನಿ

ಬೇರಿನಿಂದ ನೀರನ್ನೆಲ್ಲ,
ಮೇಲಕೆ ಹೀರ್ತೀನಿ;
ಬಾಯಿಗೆ ರುಚಿಯ ನೀಡುವಂತೆ,
ಹಣ್ಣನು ಬಿಡ್ತೀನಿ

ಹೂವು ಹಣ್ಣು ನೆರಳನು ಕೊಟ್ಟು,
ಖುಷಿಯನು ಕೊಡ್ತೀನಿ;
ಸೆಕೆಯ ತಾಪ ತಡೆಯಲು ನಾನು,
ಗಾಳಿಯ ಬೀಸ್ತೀನಿ

ಗಾಳಿ ಬೀಸಿ, ಮೋಡವ ಕರೆಸಿ,
ಮಳೆಯನು ತರ್ತೀನಿ;
ಸೌದೆ ಮಾಡಿ ಒಲೆಗೆ ಹಾಕಿ,
ಯಾಕೆ ಸುಡ್ತೀರಿ?

ಕಡಿಯೋದ್ ನಿಲ್ಸಿ, ಕರುಣೆ ತೋರ್ಸಿ,
ನನ್ನನು ಉಳಿಸಿಬಿಡಿ;
ನನ್ನಿಂದಾಗಿಯೆ ಮಳೆ-ಬೆಳೆಯೆಲ್ಲಾ,
ತಿಳ್ಕೊಂಡ್ ಮುಂದೆ ನಡೀರಿ

-ಮಾದೇಶ್

ಚಿಂತನೆಗೊಂದು ಸಂಗತಿ

ರೈತ ಮತ್ತು ಸಾಲ

ರಾಜ್ಯದ ಮುಖ್ಯಮಂತ್ರಿ ಮತ್ತು ಅರ್ಥಮಂತ್ರಿ ಆಗಿರುವವರೇ ಸ್ವತಃ ಹೇಳಿರುವಂತೆ ಕರ್ನಾಟಕ ರಾಜ್ಯದ ರೈತರು ೫೨,೦೦೦ ಕೋಟಿ ರೂಪಾಯಿಗಳ ಸಾಲದ ಹೊರೆಹೊತ್ತಿದ್ದಾರೆ. ಕೃಷಿ ಸಾಲ ಪಡೆದ ರೈತರ ಸಂಖ್ಯೆ ಒಟ್ಟು ಎಷ್ಟೆಂದು ಗೊತ್ತಾದರೆ, ಪ್ರತಿಓರ್ವ ರೈತ ಎಷ್ಟು ಲಕ್ಷ ಸಾಲ ಹೊಂದಿದ್ದಾನೆ ಎಂಬುದು ಗೊತ್ತಾಗುತ್ತದೆ. ಆ ಸಾಲಕ್ಕೆ ಕಾರಣಗಳೇನು ಮತ್ತು ಸಾಲದ ಪಟ್ಟಿಯಲ್ಲಿ ಯಾವ ವಿಷಯಗಳು ಆದ್ಯತೆ ಹೊಂದಿವೆ ಎಂಬುದನ್ನು ತಿಳಿದುಕೊಳ್ಳಬಹುದು. ಸಮಾಜಶಾಸ್ತ್ರ ವಿಜ್ಞಾನಿಗಳಿಗೆ ಇದು ಆಸಕ್ತಿದಾಯಕ ಸಂಶೋಧನೆಯ ವಿಷಯವಾಗುತ್ತದೆ. ವಿಷಯ ಗೊತ್ತಾದ ಮೇಲೆ ರೈತನ ಸಾಲದ ಪರಿಹಾರಕ್ಕೆ ಸಮಾಜ ಮತ್ತು ಸರ್ಕಾರ ಯಾವ ರೀತಿ ನೆರವು ನೀಡಬಹುದು ಎಂಬುದು ಗೊತ್ತಾಗುತ್ತದೆ. ಸ್ವಾತಂತ್ರ್ಯ ಬರುವವರೆಗೆ ರೈತನ ಬದುಕು ಮಳೆಯೊಂದಿಗೆ ಮಾತ್ರ ಸಂಬಂಧವಿರಿಸಿಕೊಂಡಿತ್ತು. ಸ್ವಾತಂತ್ರ್ಯ ನಂತರ ರೈತನ ಸಂಬಂಧ ಮಳೆಯೊಂದಿಗೆ, ಅಲ್ಲದೆ ಶಾಲದೊಂದಿಗೂ ಹೆಣೆದುಕೊಂಡಿದೆ! ಹೀಗಾಗಿ ರೈತ ಸಾಲ ಕೊಟ್ಟವರ ವಿರುದ್ಧ ಅನಾವೃಷ್ಠಿ-ಅತಿವೃಷ್ಠಿಯ ವಿರುದ್ಧವೂ ಏಕಕಾಲಕ್ಕೆ ಹೋರಾಡಬೇಕಾಗಿ ಬಂದಿದೆ.

ರಾಜ್ಯದಲ್ಲಿ ಕೃಷಿವಿಶ್ವವಿದ್ಯಾನಿಲಯಗಳು ಮತ್ತು ಅನೇಕ ಕೃಷಿತಜ್ಞರು ಇದ್ದರೂ ಸಹ ರೈತನಿಗೆ ಅವನ ಭೂವಿಸ್ತಾರ ಅವನ ನೈಜ-ಆರ್ಥಿಕ ಮತ್ತು ಜನಶಕ್ತಿ ಆಧಾರದ ಮೇಲೆ ವ್ಯವಸಾಯದ ನೀಲನಕ್ಷೆಯನ್ನು ತಯಾರಿಸಿಕೊಡುವುದಕ್ಕೆ ಏಕೆ ಸಾಧ್ಯವಾಗಿಲ್ಲ. ಅದಕ್ಕಾಗಿ ಏಕೆ ಪ್ರಯತ್ನಿಸಲಿಲ್ಲ. ಪ್ರತಿಯೊಬ್ಬ ರೈತನಿಗೂ ಕೃಷಿನೀಲನಕ್ಷೆ ತಯಾರಿಸಿಕೊಟ್ಟಿದ್ದರೆ ಬಹುಶಃ ಅವನು ಸಾಲದ ಸುಳಿಗೆ ಸಿಗುವಂಥ ಪ್ರಮೇಯ ಬರುತ್ತಿರಲಿಲ್ಲ.

ದೇಶದ ಆರ್ಥಿಕಾಭಿವೃದ್ಧಿಯನ್ನು ಅಳೆಯುವ ಆಂತರಿಕ ಒಟ್ಟು ಆದಾಯದ (ಜಿ.ಡಿ.ಪಿ) ಅಳತೆಗೋಲು ದಾರಿ ತಪ್ಪಿಸಿವಂಥದ್ದು ಮತ್ತು ವಂಚನೆ ಮಾಡುವಂಥದ್ದು ಆಗಿದೆ. ಜಿ.ಡಿ.ಪಿ ಯನ್ನು ಲೆಕ್ಕ ಹಾಕುವಾಗ ಕ್ರೂಢಿಕೃತವಾಗದೇ ಉಳಿದಿರುವ ಅನೇಕ ಕ್ಷೇತ್ರಗಳ ಅಂಕಿ-ಸಂಖ್ಯೆಗಳು ಬಿಟ್ಟು ಹೋಗಿರುತ್ತವೆ. ಅಲ್ಲದೆ ಜಿ.ಡಿ.ಪಿಯನನ್ನು ಸರ್ಕಾರವು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತದೆ. ಆದ್ದರಿಂದ ಜಿ.ಡಿ.ಪಿ ಆಧಾರದ ಮೇಲೆ ರೈತರ ಜೀವನಮಟ್ಟವನ್ನು ಅಳೆದುದರ ಕಾರಣದಿಂದಾಗಿಯೇ ಬ್ಯಾಂಕುಗಳು ರೈತರಿಗೆ ಸಾಲ ನೀಡಿವೆ ಮತ್ತು ರೈತರು ಸಹ ಸಂತೋಷವಾಗಿ ಸಾಲ ಪಡೆದಿದ್ದಾರೆ. ಈ ರೀತಿ ತಪ್ಪು ಲೆಕ್ಕಚಾರದ ಕಾರಣದಿಂದಾಗಿ ರೈತರ ಆತ್ಮಹತ್ಯೆ ನಿರಂತರವಾಗಿ ನಡೆದಿದೆ. ಯಾವ ಸರ್ಕಾರದಿಂದಲೂ ಅದನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಇಸ್ರೋ ಹಾರಿಸುವ ಉಪಗ್ರಹಗಳಿಂದ ಅತಿವೃಷ್ಠಿ-ಅನಾವೃಷ್ಠಿಯ ವಿಷಯ ಗೊತ್ತಾಗಬಹುದೇ ಹೊರೆತು ಅವುಗಳಿಂದ ವೃಷ್ಠಿ ಉಂಟುಮಾಡಲು ಸಾಧ್ಯವಿಲ್ಲ. ಆದ್ದರಿಂದ ಉಪಗ್ರಹಗಳ ಉಡಾವಣೆಗಾಗಿ ಆಗುತ್ತಿರುವ ಕೋಟ್ಯಾಂತರ ಹಣ ವ್ಯರ್ಥವಾಗುತ್ತಿದೆ.

ಜಿ.ಡಿ.ಪಿ ವಿಚಾರ ಶ್ರೀಮಂತ ರಾಷ್ಟ್ರವಾದ ಅಮೇರಿಕಾದಿಂದ ೧೯೩೭ ರ ಸುಮಾರಿಗೆ ಭಾರತಕ್ಕೆ ಬಂದದ್ದು. ಆದ್ದರಿಂದ ನಮ್ಮ ದೇಶದ ಸ್ಥಿತಿಗತಿ ರೈತರ ಜೀವನ ಪದ್ಧತಿ ಸಂಸ್ಕೃತಿ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಭಾರತದ್ದೇ ಆದ ಜಿ.ಡಿ.ಪಿಯನ್ನು ಜಾರಿಗೆ ತಂದದ್ದೆ ಆದರೆ ರೈತನು ಸಾಲದಿಂದ ಮುಕ್ತನಾಗಬಹುದೇನೋ. ●

ದಕ್ಷಿಣಾಯನ ಸಮಾವೇಶ; ಒಂದು ಚಿಂತನೆ

– ಸುರೇಂದ್ರ ಕೌಲಗಿ

೨೦೧೭ ಏಪ್ರಿಲ್ ೮ ರಂದು ಶಿವಮೊಗ್ಗದಲ್ಲಿ ದಕ್ಷಿಣಾಯನ ಕರ್ನಾಟಕ ಚಳುವಳಿ "ಅಭಿವ್ಯಕ್ತಿ" ಎಂಬ ಹೆಸರಿನಲ್ಲಿ ರಾಜ್ಯ ಮಟ್ಟದ ಬರಹಗಾರರ, ಚಿಂತಕರ ಸಮಾವೇಶ ನಡೆಸಿತು. ಸಮಾವೇಶಕ್ಕೆ ಶ್ರೀ ದೇವನೂರು ಮಹಾದೇವರವರು ಚಾಲನೆ ಕೊಟ್ಟರು. ಸಾಹಿತಿ ಚಂದ್ರಶೇಖರ್ ಪಾಟೀಲ್ ಉದ್ಘಾಟಿಸಿದರು. ಈ ಸಮಾವೇಶದಲ್ಲಿ "ಅಭಿವ್ಯಕ್ತಿ" ಎಂಬ ವಿಷಯದ ಮೇಲೆ ಸಂವಾದ ನಡೆಯಿತು. ಅಲ್ಲದೆ ಫಾಸಿಜಂ, ಮತ್ತು ಸಧ್ಯದ ರಾಜಕೀಯ ತಲ್ಲಣಗಳು ಎಂಬ ವಿಷಯದ ಮೇಲೆ ಗೋಷ್ಠಿಗಳು ನಡೆದವು. ಸುಮಾರು ೩೫೦ ಬರಹಗಾರರು ಮತ್ತು ಕಲಾವಿದರು ಭಾಗವಹಿಸಿದ್ದರು. ಸಮಾವೇಶದಲ್ಲಿ ಶ್ರೀ ಕಂಠಕೂಡಿಗೆ, ಭಾಷಾತಜ್ಞ ಗಣೇಶ್‌ದೇವಿ, ಬಿ.ಟಿ.ಲಲಿತಾನಾಯಕ್, ಡಾ॥ರಾಜೇಂದ್ರ ಚೆನ್ನಿ, ಡಿ.ಎಸ್. ನಾಗಾಭೂಷಣ್ ಮುಂತಾದ ಪ್ರಮುಖರು ಭಾಗವಹಿಸಿದ್ದರು. ಕಲಬುರ್ಗಿ, ದಾಬೋಲ್‌ಕರ್, ಫಾನ್ಸರೆ ಮುಂತಾದ ವಿಚಾರವಾದಿಗಳ ಹತ್ಯೆಯಾದ ನಂತರ ಗಣೇಶ್ ಎನ್ ದೇವಿಯವರು ದಕ್ಷಿಣಾಯನ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದರು. ಇದೊಂದು ಸಂಸ್ಥೆಯೂ ಅಲ್ಲ, ಸಂಘಟನೆಯೂ ಅಲ್ಲ. ಯಾವುದೇ ರಾಜಕೀಯ ಪಕ್ಷದ ಪರ ಅಥವಾ ವಿರುದ್ಧವಿಲ್ಲ. ಫಾಸಿಜಂ ಒಳಗೊಂಡಂತೆ ಧಾರ್ಮಿಕ, ರಾಜಕೀಯ, ಸಾಮಾಜಿಕ ಕೇಡುಗಳ ವಿರುದ್ಧ ಜನಾಭಿಪ್ರಾಯ ರೂಪಿಸಲೆಂದು ಹುಟ್ಟಿದ ಚಳುವಳಿ ದಕ್ಷಿಣಾಯನ, ಮಾನವೀಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳುಳ್ಳ ಸಮಾಜ ಬಯಸುವಂಥವರೆಲ್ಲರೂ ದಕ್ಷಿಣಾಯನ ಚಳುವಳಿಯಲ್ಲಿ ಸೇರಬಹುದು. ಇದುವರೆಗೆ ಧಾರವಾಡ, ಕೊಲ್ಲಾಪುರ, ಬೆಳಗಾವಿ, ಪುಣೆ ಮತ್ತು ದಂಡಿ ಮುಂತಾದ ಸ್ಥಳಗಳಲ್ಲಿ ದಕ್ಷಿಣಾಯನ ಸಮಾವೇಶಗಳು ನಡೆದಿವೆ. ಕನ್ನಡ ಲೇಖಕರೂ ಸೇರಿದಂತೆ ಹಿಂದಿ, ಮರಾಠಿ, ಕೊಂಕಣಿ, ಪಂಜಾಬಿ, ಗುಜರಾತಿ, ಬಂಗಾಳಿ ಮುಂತಾದ ಭಾಷೆಗಳ ಲೇಖಕರು ಈ ಸಮಾವೇಶಗಳಲ್ಲಿ ಭಾಗವಹಿಸಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

ದಕ್ಷಿಣಾಯನ ಸಮಾವೇಶದ ನಂತರ ವೈಚಾರಿಕ ಕಾರ್ಯಾನ್ವಯಗಳು ನಡೆದಿವೆಯೇ ಎಂಬುದರ ಬಗ್ಗೆ ಗೊತ್ತಾಗಿಲ್ಲ. ಗ್ರಾಮಪಂಚಾಯತ್

ಚುನಾವಣೆಯಲ್ಲಿ ಭಾಗವಹಿಸುವುದರ ಮೂಲಕ ಹೊಸ ರಾಜಕಾರಣಕ್ಕೆ ತಳಪಾಯ ಹಾಕಬೇಕಿದೆ. ಆಗ ಮಾತ್ರ ಜನಾಂದೋಲನಗಳ ಧ್ವನಿಗೂ ಸತ್ವ ಬರುತ್ತದೆ ಎಂದು ದೇವನೂರು ಮಹಾದೇವರು ಸಮಾವೇಶದಲ್ಲಿ ತಿಳಿಸಿದ್ದಾರೆ. ಅದಕ್ಕಾಗಿ ಪಕ್ಷಾತೀತವಾದ ಗ್ರಾಮಪಂಚಾಯಿತಿ ಕಣ ಆಯ್ಕೆ ಮಾಡಿಕೊಳ್ಳಬೇಕಿದೆ ಎಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ. ದೇಶದಲ್ಲಿ ಇಂದು ವಿಚಾರ ಸ್ವಾಂತ್ರ್ಯದ ಹರಣ, ಫಾಸಿಜಂಮಾದರಿಯ ಆಡಳಿತಪದ್ಧತಿ, ಭ್ರಷ್ಟಾಚಾರ ರಾಜಕಾರಣ ಇವೇ ಮುಂತಾದ ಗಂಭೀರ ಕಾರಣಗಳಿಂದಾಗಿ ದೇಶವು ದಕ್ಷಿಣಾಯನದ ಕತ್ತಲಲ್ಲಿ ಹೋಗುತ್ತಿದೆ ಎಂಬ ಭಾವನೆ ಸಮಾವೇಶದ ಆಯೋಜಕರಲ್ಲಿ ಕೆಲಸ ಮಾಡುತ್ತಿದೆ ಎಂದು ಅನಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಮಾನವನ ಮರಣೋತ್ತರ ವಿಚಾರವಾದ ಮೃತ್ಯು-ಮೀಮಾಂಸೆಯಲ್ಲಿ ದಕ್ಷಿಣಾಯನ ಮತ್ತು ಉತ್ತರಾಯಣ ಎಂಬ ಪಾರಿಭಾಷಿಕ ಶಬ್ದಗಳು ಉಪಯೋಗದಲ್ಲಿವೆ. ಯಾರ ಮೃತ್ಯುವಿನ ಸಮಯದಲ್ಲಿ ಹೊಗೆಯಾಡುತ್ತಿರುತ್ತದೋ, ಒಳಗೆ ಮತ್ತು ಹೊರಗೆ ಕತ್ತಲೆಯಾಗುತ್ತಿದೆಯೋ, ಕೃಷ್ಣ ಪಕ್ಷದ ಚಂದ್ರ ಕ್ಷೀಣವಾಗುತ್ತಿದ್ದಾನೋ, ಅಂಥ ಸನ್ನಿವೇಶದಲ್ಲಿ ಸತ್ತ ಮನುಷ್ಯನ ಆತ್ಮವು ಪುನಃ ಜನನ-ಮರಣದ ಚಕ್ರದಲ್ಲಿ ಸಿಲುಕಿ ಹಾಕಿಕೊಳ್ಳುವುದು. ಈ ರೂಪಕಕ್ಕೆ ದಕ್ಷಿಣಾಯನ ಎಂಬ ಹೆಸರು ಕೊಡಲಾಗಿದೆ. ಇದಕ್ಕೆ ವಿರುದ್ಧವಾಗಿ ಯಾರ ಮೃತ್ಯುವಿನ ಸಮಯದಲ್ಲಿ ಅಗ್ನಿ ಉರಿಯುತ್ತಿದಿಯೋ, ಸೂರ್ಯ ಬೆಳಗುತ್ತಿದ್ದಾನೋ, ಶುಕ್ಲಪಕ್ಷದ ಚಂದ್ರ ವರ್ಧಿಸುತ್ತಿದ್ದಾನೋ, ಹೊರಗೆ ನಿರಭ್ರ ಮತ್ತು ಸುಂದರ ಆಕಾಶವಿದೆಯೋ ಅಂಥ ಸಮಯದಲ್ಲಿ ಮೃತ್ಯು ಹೊಂದಿದ ವ್ಯಕ್ತಿಯ ಆತ್ಮ ಬ್ರಹ್ಮನಲ್ಲಿ ವಿಲೀನವಾಗಿ ಜನನ-ಮರಣದ ಚಕ್ರದಿಂದ ಪಾರಾಗುತ್ತದೆ ಎಂಬ ನಂಬಿಕೆ ಇದೆ.

ಈಗ ನಮಗೆ ಬೇಕಿರುವುದು ಉತ್ತಾರಾಯನದ ವಿಚಾರವೇ ಹೊರೆತು ದಕ್ಷಿಣಾಯನದ ವಿಚಾರವಲ್ಲ. ಎಂಥ ಅಂಧಕಾರದಲ್ಲಿಯೂ ಬೆಳಕು ಇದೆ ಎಂಬ ವಿಚಾರ ಇದೆಯಾದರೂ ದಕ್ಷಿಣಾಯನದಲ್ಲಿಯ ಕಠಿಣ ಮಾರ್ಗವನ್ನು ಕ್ರಮಿಸಿ ಬೆಳಕಿನತ್ತ ಹೋಗಲು ಪ್ರಯತ್ನಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ನಾವು ಆಲೋಚಿಸಬೇಕು. ದಕ್ಷಿಣಾಯನದ ಕತ್ತಲೆಯ ದಾರಿಯಲ್ಲಿ ಕ್ರಮಿಸಲು ಪರಸ್ಪರ ಕೈಹಿಡಿದು ನಡೆಯಬೇಕಾಗುತ್ತದೆ. ಅಂದರೆ ಪರಸ್ಪರರ ನೆರವು ಅಥವಾ ಸಹಕಾರ ಬೇಕಾಗುತ್ತದೆ. ಅದೇ ಸಹಕಾರದ ಮನೋಭಾವನೆಯನ್ನು ಹೊಂದಿ ನಮ್ಮ ಬಾಳನ್ನು ಸುಗಮಗೊಳಿಸಿಕೊಂಡರೆ ಸಮಸ್ಯೆಗಳಿಗೆ ಮುಕ್ತಿಮಾರ್ಗವಾಗಿರುವ ಉತ್ತರಾಯನ ಮಾರ್ಗದಲ್ಲಿ ನಾವು ಪ್ರವೃತ್ತಿಸಬಹುದಲ್ಲವೇ.

ದಕ್ಷಿಣಾಯನ ಚಳುವಳಿಗೆ ಮೂಲ ಕಾರಣ ವೈಚಾರಿಕ ಕ್ಷೇತ್ರದಲ್ಲಿರುವ ಅಸಹಿಷ್ಣುತೆ. ಇಲ್ಲಿ ಒಂದು ವೈರುಧ್ಯವಿದೆ. ನಿಜವಾದ ವೈಚಾರಿಕತೆ ಇರುವಲ್ಲಿ ವೈಚಾರಿಕ ಭಿನ್ನಾಭಿಪ್ರಾಯದಿಂದ ಯಾವ ಬಗೆಯ ಗಂಡಾಂತರವೂ ಇರಲಾರದು. ವೈಚಾರಿಕತೆಯ ಕ್ಷೇತ್ರದಲ್ಲಿ ಅ–ಸಹಿಷ್ಣುತೆ ಬರಲು ಕಾರಣ ಆ ಕ್ಷೇತ್ರದಲ್ಲಿ ಧಾರ್ಮಿಕ ಮೂಲಭೂತವಾದ ನುಸುಳಿಕೊಂಡಿರುವುದು. ಇಲ್ಲಿಯೂ ಒಂದು ವೈರುಧ್ಯವಿದೆ. ನಿಜ ಧರ್ಮವಿಚಾರ ಇರುವೆಡೆ ಧಾರ್ಮಿಕ ಮೂಲಭೂತವಾದವಿರಲು ಅವಕಾಶವಿಲ್ಲ. ಧರ್ಮಶ್ರದ್ಧೆಯುಳ್ಳವರು, ಧರ್ಮದ ನಿಜಾರ್ಥವನ್ನು ಮರೆತು, ಕೇವಲ ಶುಷ್ಕ ಧರ್ಮಾಚರಣೆಗೆ ತೊಡಗಿದಾಗ ಮಾತ್ರ ಧಾರ್ಮಿಕ ಮೂಲಭೂತವಾದ ಜನನವಾಗುತ್ತದೆ.

ಮೇಲ್ಕಾಣಿಸಿದ ವೈರುಧ್ಯದ ಸಂಗತಿಗಳಲ್ಲದೆ ನಮ್ಮ ಜೀವನವ್ಯಾಪಾರದಲ್ಲಿ ಇನ್ನೂ ಅನೇಕಾನೇಕ ವೈರುಧ್ಯಗಳಿವೆ. ವೈರುಧ್ಯಗಳ ಗೂಡೇ ನಮ್ಮ ಬದುಕಾಗಿದೆ.

ಜೀವನದಲ್ಲಿಯ ವೈರುಧ್ಯಗಳನ್ನು ಹೇಗೆ ಹೋಗಾಲಾಡಿಸಬೇಕು ಎಂಬುದೆ ಈ ಕಾಲದ ಸವಾಲಾಗಿದೆ. ಆದರೆ ಜಾಗತೀಕರಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳು, ವೈರುಧ್ಯಗಳನ್ನು ಇನ್ನೂ ಸಂಕೀರ್ಣಗೊಳಿಸಿವೆ. ಇವೆಲ್ಲವುಗಳ ಕಾರಣದಿಂದಾಗಿ ಮನುಷ್ಯನ ಮನಸ್ಸು ಭ್ರಮಿತಗೊಂಡಿದೆ; ತಾಳ್ಮೆ ಕಳೆದುಕೊಂಡಿದೆ; ಅಸಹಿಷ್ಣುತೆ ಹೆಚ್ಚಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ದಕ್ಷಿಣಾಯನ ಚಳುವಳಿ ಪಂಪ, ಬಸವಣ್ಣ, ಅಂಬೇಡ್ಕರ್, ಕುವೆಂಪು, ಕಾರಂತ, ತೇಜಸ್ವಿ ಮತ್ತು ಲಂಕೇಶರಂತ ಬುದ್ಧಿಜೀವಿಗಳ ವಿಚಾರಗಳ ಮಾರ್ಗದರ್ಶನ ಪಡೆಯಲು ಬಯಸುತ್ತದೆ. ಈ ಬುದ್ಧಿಜೀವಿಗಳು ಎಲ್ಲ ಪ್ರಕಾರದ ಸಂಕುಚಿತತೆಯನ್ನು ಮೀರಿದಂತವರಾಗಿದ್ದರು; ವಿಶಾಲ ಮನೋಭಾವವುಳ್ಳವಂತವರಾಗಿದ್ದರು; ಒಂದು ವಿಶೇಷ ಮನೋಸ್ಥಿತಿಯನ್ನು ತಲುಪಿದವರಾಗಿದ್ದರು. ಇಂದು ಅಗತ್ಯವಾಗಿರುವುದು ಅಂಥ ಮನೋಶುದ್ಧಿ. ಆ ಮನೋಶುದ್ಧಿಯ ಕೆಲಸವನ್ನು ಸಾಹಿತಿಗಳು, ಕಲಾಕಾರರು, ಕವಿಗಳು, ಬುದ್ಧಿಜೀವಿಗಳು ಮಾಡಬೇಕಿದೆ. ಮನೋಶುದ್ಧಿಯ ಕಾರ್ಯವನ್ನು ಪಾರಿಭಾಷಿಕ ಶಬ್ಧವಾಗಿ ಚಿತ್ತನಿರ್ಮಾಣವೆಂದು ಹೇಳಬಹುದು. ಚಂಚಲವಾಗಿರುವ ಮನೋಲೋಕದಿಂದ ಸಂಕಲ್ಪಬದ್ಧವಾಗಿರುವ ಚಿತ್ತಲೋಕಕ್ಕೆ ಜನರ ಮನಸ್ಸನ್ನು ಒಯ್ಯುವ ಕೆಲಸವನ್ನು ಎಲ್ಲರೂ ನಿಷ್ಠೆಯಿಂದ ಮಾಡಬೇಕಿದೆ.

ಅಂಕಣಕಾರರಾದ ಪೃಥ್ವಿದತ್ತಚಂದ್ರಶೋಭಿ ಅವರು ದಕ್ಷಿಣಾಯನ ಸಮಾವೇಶದ ಸಂದರ್ಭದಲ್ಲಿ ಬರೆದ ಲೇಖನದಲ್ಲಿ "ನಮಗಿಂದು ಅಗತ್ಯವಿರುವುದು ವಸ್ತುನಿಷ್ಠ, ಚೈತನ್ಯಶೀಲ, ವೈಚಾರಿಕತೆ ಮತ್ತು ನಿರ್ದಾಕ್ಷಿಣ್ಯವಾದ

ನೈತಿಕತೆ. ಇವುಗಳಲ್ಲಿದೆ ನಮ್ಮ ಕಾಲಕ್ಕೆ ಅಗತ್ಯವಿರುವ ಹೊಸ ಪ್ರಗತಿಪರ ವೈಚಾರಿಕತೆ ಮತ್ತು ಸಾಂಸ್ಕೃತಿಕ ರಾಜಕಾರಣವು ಹುಟ್ಟುವುದು ಕಷ್ಟಸಾಧ್ಯ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇಂಥ ಸದುದ್ದೇಶಕ್ಕೆ ಯೋಗ್ಯ ವಾತಾವರಣವನ್ನು ದೇಶದಲ್ಲಿ ನಿರ್ಮಿಸಬೇಕಾದರೆ ಚಿತ್ತ ನಿರ್ಮಾಣದ ಕೆಲಸ ಆಗಬೇಕು. ಇದರ ಅಗತ್ಯವನ್ನು ಯೋಗಶಾಸ್ತ್ರ ಪ್ರವರ್ತಕ ಪತಂಜಲಿ, ರಮಣಮಹರ್ಷಿ, ಗಾಂಧಿ, ವಿನೋಬಾ ಅಂಥವರು ಹೇಳುತ್ತಾ ಬಂದಿದ್ದಾರೆ. ಎರಡು ಸಾವಿರ ವರ್ಷಗಳ ಹಿಂದೆ ಏಸುಕ್ರಿಸ್ತ ಕೂಡ ಇಂಥದೆ ಮಾತನ್ನು "ಪುಟ್ ಆನ್ ದಿ ನ್ಯೂ ಮ್ಯಾನ್"- ಹೊಸ ಮನುಷ್ಯನನ್ನು ಧರಿಸು, ಹೊಸ ಚಿತ್ತದ ನಿರ್ಮಾಣ ಮಾಡು ಎಂದು ಹೇಳಿದನು. ಶ್ರೀ ಅರವಿಂದ ಮಹರ್ಷಿಯವರು ಅತಿಮಾನಸ ಭೂಮಿಕೆಯ ಮಾತನ್ನು ಹೇಳಿದ್ದಾರೆ. ಮಾನವಕೋಟಿಯನ್ನು ಆ ಭೂಮಿಕೆಗೆ ಕರೆದೊಯ್ಯುವ ಕನಸನ್ನು ಹೊಂದಿ ಅದಕ್ಕಾಗಿ ಅವರು ಇಡೀ ಜೀವನ ತಪಶ್ಚರ್ಯ ಮಾಡಿದರು. ಗಾಂಧೀಜಿಯವರು ಜೀವನಶಿಕ್ಷಣದ ವಿಚಾರವನ್ನು ಹೇಳುವುದರ ಮೂಲಕ ಹೊಸ ಮನುಷ್ಯನ ನಿರ್ಮಾಣದ ಸಲಹೆಯನ್ನು ಕೊಟ್ಟಿದ್ದರು. ಸ್ವಾರ್ಥಜನ್ಯ ಸಂಸಾರದ ಸುಖಗಳನ್ನು ಗಮನದಲ್ಲಿರಿಸಿಕೊಂಡು ಯಾಪ ಶಿಕ್ಷಣವನ್ನು ಕೊಡಲಾಗುತ್ತದೋ ಅದರಿಂದ ಭೌತಿಕತಾಪರಾಯಣ ಸಮಾಜ ನಿರ್ಮಾಣವಾಗಿ ಅದರಲ್ಲಿ ವಿಷಮತೆ ಮತ್ತು ಶೋಷಣೆ ಮತ್ತು ಅಸಹಿಷ್ಣುತೆ ಮುಂತಾದ ದೋಷಗಳುಂಟಾಗುತ್ತವೆ ಎಂದು ಹೇಳಿದ್ದರು. ಹದಿನಾಲ್ಕು ವರ್ಷಗಳ ಕಾಲ ಸಂತ ವಿನೋಬಾ ಅಖಂಡ ಪಾದಯಾತ್ರೆಯ ಮೂಲಕ ಮನಃಪರಿವರ್ತನೆ, ಹೃದಯ ಪರಿವರ್ತನೆಯ ಮಾತನ್ನು ಹೇಳಿದರು. ೧೮೯೩ ಜೂನ್ ೭ ರಂದು ಗಾಂಧಿಯವರು ದಕ್ಷಿಣಾಫ್ರಿಕಾದ ಮೆರಿಟ್ಸಬರ್ಗ್ ರೈಲ್ವೆ ಸ್ಟೇಷನ್‌ನಲ್ಲಿ ಗಾಡಿಯಿಂದ ಹೊರಗೆ ತಳ್ಳಲ್ಪಟ್ಟಾಗ ಅವರ ಮನಸ್ಸಿನಲ್ಲಿ ಗೊಂದಲ ಉಂಟಾಯಿತು. ನಾನು ಭಾರತಕ್ಕೆ ಹಿಂದಿರುಗಲೇ ಅಥವಾ ಆಫ್ರೀಕಾದಲ್ಲಿದ್ದುಕೊಂಡೇ ಭಾರತೀಯರಿಗಾಗುತಿರುವ ಅನ್ಯಾಯಗಳ ವಿರುದ್ಧ ಹೋರಾಡಿ ಗೆಲವು ಸಾಧಿಸಬೇಕೆ ಎಂಬುದಾಗಿ, ಆಗ ಗಾಂಧಿ ಗಲಿಬಿಲಿಗೊಂಡ ಮನೋಕ್ಷೇತ್ರದಿಂದ ದೃಢವಾದ ಚಿತ್ತ ನಿರ್ಮಾಣದ ಕ್ಷೇತ್ರಕ್ಕೆ ಬಂದರು ಮತ್ತು ದಕ್ಷಿಣಾಫ್ರಿಕಾದಲ್ಲಿಯೇ ಇದ್ದುಕೊಂಡು ಹೋರಾಟಮಾಡಬೇಕೆಂದು ಸಂಕಲ್ಪಿಸಿದರು. ಆ ವಿಷಯದಲ್ಲಿ ಅವರು ಯಶಸ್ವಿಯಾದರೂ ಕೂಡ. ಚಿತ್ತನಿಮಾಣದ ಸ್ಥಿತಿ ಗಾಂಧೀಯವರಲ್ಲಿ ಇಲ್ಲದೇ ಹೋಗಿದ್ದರೆ ಅವರು ಭಾರತಕ್ಕೆ ಮರಳುತ್ತಿದ್ದರು; ಮಹಾತ್ಮರಾಗುತ್ತಿರಲಿಲ್ಲ! ಭಾರತದಲ್ಲಿ ಎಲ್ಲ ವಿಚಾರವಾದಿಗಳು ಬಯಸುತ್ತರುವಂಥ ನವಸಮಾಜದ ನಿರ್ಮಾಣವಾಗಬೇಕಾದರೆ ಇಂಥ ಸಂಕಲ್ಪ

ಶಕ್ತಿಯ ಚಿತ್ತನಿರ್ಮಾಣದ ಕೆಲಸವಾಗಬೇಕಿದೆ. ಯಾವುದೇ ವೇದಿಕೆಯ ಮೇಲಿಂದ ಸಾಹಿತಿಯಾಗಿರಲಿ ಅಥವಾ ರಾಜಕಾರಣಿಯಾಗಿರಲಿ ತಮ್ಮ ವಿಚಾರಕ್ಕೆ ವಿರುದ್ಧವಾದವರ ತೇಜೋವಧೆ ಮಾಡುವುದನ್ನು ನಿಲ್ಲಿಸಬೇಕು. ಇಂಥ ತೇಜೋವಧೆಯ ಕೆಲಸ ಶಿವಮೊಗ್ಗ ಸಮಾವೇಶದಲ್ಲಿ ನಡೆದಿದ್ದಕ್ಕಾಗಿ ಈ ವಿಷಯವನ್ನು ಪ್ರಸ್ಥಾಪಿಸಬೇಕಿದೆ.

ಸಮಾವೇಶವನ್ನು ಉದ್ಘಾಟಿಸುತ್ತಾ ಚಂದ್ರಶೇಖರ ಪಾಟೀಲ್‌ರವರು ಸಾರ್ವಜನಿಕ ಜೀವನದ ಓರ್ವ ಪ್ರತಿಷ್ಠಿತ ವ್ಯಕ್ತಿಯ ತೇಜೋವಧೆ ಮಾಡಿದ್ದಾರೆ. ಅವರು ಹೇಳಿದ ಮಾತುಗಳು ಇಂತಿವೆ. "ಭ್ರಷ್ಟವ್ಯವಸ್ಥೆಯಲ್ಲಿ ಹೊಟ್ಟೆ ಬಿರಿಯುವಂತೆ ತಿಂದು ಕೆಲವು ಮುದಿಗೊಡ್ಡುಗಳು ಈ ವಯಸ್ಸಿನಲ್ಲೂ ಬೇರೆ ಪಕ್ಷಕ್ಕೆ ಹೋಗುತ್ತಿವೆ. ಈ ಮಾತನ್ನು ಓದಿರಬಹುದಾದ ಸಂಬಂಧಿಸಿದ ವ್ಯಕ್ತಿಯ ಮನಸ್ಸಿನಲ್ಲಿ ಈ ಮಾತನ್ನು ಆಡಿದ ಮಹನೀಯನ ಬಗ್ಗೆ ಅನಾದರ ಉಂಟಾಗುವುದೇ ಹೊರೆತು ಸಾಮರಸ್ಯವಲ್ಲ. ಇಂದು ವೈಚಾರಿಕ ಕ್ಷೇತ್ರದಲ್ಲಿ ಅಸಹನೆ ಉಂಟಾಗುವುದಕ್ಕೆ ಇಂಥ ಲಘು ಹೇಳಿಕೆಗಳು ಕೂಡ ಕಾರಣವಾಗುತ್ತದೆ ಎಂದು ತಿಳಿದುಕೊಳ್ಳಬೇಕು.

ಗಣೇಶ್ ಎನ್ ದೇವಿಯವರ ಪ್ರಕಾರ ಅಭಿವ್ಯಕ್ತಿ ಸಮಾವೇಶ ಪ್ರಯೋಗವಲ್ಲ. ಅದು ಚಲನಶೀಲ ಪ್ರಕ್ರಿಯೆ ಉತ್ತರದ ಕೆಲವು ರಾಜ್ಯಗಳಲ್ಲಿ ಈಗಾಗಲೆ ಆರಂಭವಾಗಿದೆ. ದಕ್ಷಿಣದಲ್ಲಿ ಮುಂದುವರಿಯುತ್ತಿದೆ. ರಾಜಕೀಯದಿಂದ ದೂರ ಉಳಿದು ಕಾರ್ಯನಿರ್ವಹಿಸುತ್ತದೆ ಎಂಬ ವಿಚಾರ ಇಟ್ಟುಕೊಂಡಿದ್ದಾರೆ. ಸಮಾವೇಶಕ್ಕೆ ಚಾಲನೆ ಕೊಟ್ಟ ದೇವನೂರು ಮಹಾದೇವರವರು ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಈ ಕಾರ್ಯಕ್ಕೆ ಮಾಧ್ಯಮವನ್ನಾಗಿ ಮಾಡಿಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದಾರೆ. ಪುನಃ ಇಲ್ಲಿ ವೈರುಧ್ಯ ಕಾಣುತ್ತದೆ. ಗ್ರಾಮಪಂಚಾಯಿತಿಗಳ ಚುನಾವಣೆಯು ಸಂವಿಧಾನ ಆಶಯದ ಪ್ರಕಾರ ಪಕ್ಷಾತೀತವಾಗಿರಬೇಕಾಗಿದ್ದರೂ ವಸ್ತುಸ್ಥಿತಿ ಹಾಗೆ ಇಲ್ಲವೆಂಬುದು ದೇವನೂರು ಅವರಿಗೆ ಗೊತ್ತಿಲ್ಲದೆ ಇಲ್ಲ. ಗ್ರಾಮಗಳು ಪಕ್ಷ ರಾಜಕಾರಣದ ಮಡುವಿನಲ್ಲಿ ಸಿಕ್ಕಿ ಕೊಂಡಿವೆ. ಈಗ ಅವು ಸರ್ಕಾರದ ಏಜೆಂಟ್‌ಗಳಾಗಿ ಕೆಲಸ ಮಾಡುತ್ತಿವೆ. ಯುವಕರು ಗ್ರಾಮಗಳನ್ನು ತೊರೆದು ನಗರಗಳಿಗೆ ಹೋಗುತ್ತಿದ್ದಾರೆ. ಸುಶಿಕ್ಷಿತರು ಹಳ್ಳಿಗಳಿಗೆ ಹಿಂದಿರುಗುತ್ತಿಲ್ಲ. ಉತ್ಸಾಹದ ದೃಷ್ಟಿಯಿಂದಲೂ, ವಿಚಾರದ ದೃಷ್ಟಿಯಿಂದಲೂ, ಬರಡಾಗಿರುವ ಗ್ರಾಮಗಳಲ್ಲಿ ಹೊಸತನ್ನು ತರುವ ಪ್ರಯತ್ನ ಎಷ್ಟರ ಮಟ್ಟಿಗೆ ಸಾಧ್ಯವೆಂಬುದನ್ನು ಸಮಾವೇಶದಲ್ಲಿ ಚರ್ಚಿಸಿ ಈ ಬಗ್ಗೆ ತೀರ್ಮಾನಕ್ಕೆ ಬಂದಿದ್ದರೆ ಸೂಕ್ತವಾಗುತ್ತಿತ್ತು.

ದಕ್ಷಿಣಾಯನ ಕುರಿತು ಪತ್ರೋತ್ತರ

ಶ್ರೀಡಿ.ಎಸ್.ನಾಗಾಭೂಷಣ್‌ಅವರಿಯ ಗಣೇಶ್ ದೇವಿಜಿ. ಅವರಿಗೆ ಬರೆದ ಪತ್ರ

೦೯/೦೪/೧೭

ಪ್ರಿಯ ಶ್ರೀ ಗಣೇಶ್ ದೇವಿ ಜಿ.

ನಾನು ನನ್ನ ಪತ್ನಿ ಸವಿತಾರವರೊಂದಿಗೆ ದಕ್ಷಿಣಾಯನ ಸಮಾವೇಶಕ್ಕೆ ಬಂದಿದ್ದೆ. ಆ ಸಮಾವೇಶ ಕಲಾಕಾರರು ಮತ್ತು ಬರಹಗಾರರಿಗೆ ಸಂಬಂಧಿಸಿದ್ದಾಗಿತ್ತು. ಅದು ಶಿವಮೊಗ್ಗೆಯಲ್ಲಿ ನಡೆಯಿತು. ಆ ಸಮಾವೇಶವು ರಾಜಕೀಯ ಘಟನೆಯಾಗದೇ ಹೆಚ್ಚಾಗಿ ಸಾಂಸ್ಕೃತಿಕ ಘಟನೆಯಾಗುವುದೆಂದು ನಾನು ನಿರೀಕ್ಷಿಸಿದ್ದೆ. ಆದರೆ ಅದು ಎಲ್ಲ ಬಗೆಯ ಮಾಜಿ ಕಮ್ಯುನಿಸ್ಟರು ಏರ್ಪಡಿಸಿರುವ ರಾಜಕೀಯ ಘಟನೆಯಾಗಿ ಸಂಭವಿಸಿದ್ದು ನಮಗೆ ನಿರಾಶೆಯನ್ನುಂಟುಮಾಡಿತು. ಆ ಮಾಜಿ ಕಮ್ಯುನಿಸ್ಟರು ತಮ್ಮ ಚಿಂತನಾಕ್ರಮವನ್ನು ನಿಲ್ಲಿಸಿ ಈಗ ಕೇವಲ ನಕಾರಾತ್ಮಕ ರಾಜಕಾರಣದಲ್ಲಿ ತೊಡಗಿ ಹೊಸ ಹೊಸ ಹೆಸರಿನಲ್ಲಿ ತಮ್ಮನ್ನು ಮೇಳೆಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅದರಲ್ಲಿ ಒಂದು ಅಂಬೇಡ್ಕರ್‌ವಾದ. ಆ ವಾದವು ಮಾರ್ಕ್ಸ್–ಲೆನಿನ್ ರಾಜಕಾರಣದ ಶೈಲಿಯಲ್ಲಿ ಪುನರ್ ಶೋಧಿತವಾಗಿದೆ. ಆದ್ದರಿಂದ ಸಮಾವೇಶದಲ್ಲಿಯ ಚರ್ಚೆಗಳು ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಂಡೆನಿಸಿತು. ಅದರಿಂದಾಗಿ ರಾಜ್ಯದ ಎಲ್ಲ ಪ್ರಗತಿಪರ ಸಮೂಹಗಳಲ್ಲಿಯ ಅಸಂತುಷ್ಟ ವ್ಯಕ್ತಿಗಳನ್ನು ತಮ್ಮ ಗುಂಪಿಗೆ ಸೇರಿಕೊಳ್ಳಲು ವಿಫಲರಾದರು. ನಾನು ಇದಕ್ಕಾಗಿ ಕಮ್ಯುನಿಸ್ಟ್‌ರನ್ನು ದೂಷಿಸುವುದಿಲ್ಲ. ಏಕೆಂದರೆ ಈ ರೀತಿ ಮಾಡುವುದು ಇತಿಹಾಸದುದ್ದಕ್ಕೂ ಕಂಡು ಬಂದ ಅವರ ವಿಧಾನವಾಗಿದೆ. ಆದರೆ ನಿಮ್ಮ ನೇತೃತ್ವದಲ್ಲಿ ಈ ರೀತಿ ಸಂಭವಿಸುತ್ತದೆ ಎಂದು ನಾನು ನಿರೀಕ್ಷಿಸಿರಲಿಲ್ಲ. ನಾನು ತಪ್ಪಿದಲಾರೆನೆಂದು ಆಶಿಸುತ್ತೇನೆ.

ಅಂಶಿಕ ಸಾಂಸ್ಕೃತಿಕ ನಿಮ್ಮ ಈ ಪ್ರಯತ್ನವನ್ನು ಮಾರುವೇಶದ ರಾಜಕೀಯ ವ್ಯಕ್ತಿಗಳು ಹೈ–ಜಾಕ್ ಮಾಡಿದರು. ನನ್ನ ಗೌರವಾನ್ವಿತ ಸ್ನೇಹಿತರಾದ ಚೆನ್ನಿರವರು ನಿಸ್ಸಾಹಯಾಕರಾಗಿದ್ದರೋ ಅಥವಾ ಸ್ವಯಂ ತಮ್ಮ ಮಾಜಿ ಕಾಮ್ರೇಡ್‌ರ ರಾಜಕೀಯ ಕುತಂತ್ರಕ್ಕೆ ಬಲಿಯಾದರೋ ಗೊತ್ತಿಲ್ಲ. ಆ ಮಾಜಿ ಕಾಮ್ರೇಡ್ಸ್‌ಗಳು ಈ ಸಮಾವೇಶವನ್ನು ಆಯೋಜಿಸಿವುದರಲ್ಲಿ ಭಾಗಿಯಾಗಿದ್ದರು. ಚೆನ್ನಿರವರು ತಮ್ಮ ವಿಚಾರಗಳನ್ನು ಮಂಡಿಸುವಾಗ "ಕೆಲವು ವಿಷಯಗಳು ಮರೆಮಾಚಿದ ವಿಷಯಗಳೆಂದು" ಹೇಳಿ ತಮ್ಮ ಕುಶಲತೆಯನ್ನು ಮೆರೆದರು. ಮರೆಮಾಚಿದ ವಿಷಯಗಳು ಇರುವುದಾದರೆ ಈ ಎಲ್ಲ ನಾಟಕವೆಲ್ಲ ಏಕೆ ಬೇಕಿತ್ತು? ಆದರೆ ಇದೊಂದು ಅವರ ಕಡೆಯಿಂದ ಭ್ರಮೆ

ಹುಟ್ಟಿಸುವ ಪ್ರಯತ್ನವೆಂದು ತಿಳಿಯಲು ಸಭಿಕರಲ್ಲಿ ಕೆಲವರು ಚೆನ್ನಿ ಅವರಿಗಿಂತ ಕುಶಲರಾಗಿದ್ದರು.

ಮೋದಿಯವರ ರಾಜ್ಯಭಾರವನ್ನು ಫಾಸಿಸ್ಟ್ ಎಂದು ಹೆಸರಿಸಲು ಏಕೆ ಇಷ್ಟೊಂದು ಆತುರವೆಂಬುದೇ ನನ್ನ ಮುಖ್ಯ ಪ್ರಶ್ನೆ? ಇದು ಯಾರ ಎಜೆಂಡಾ? ಮತ್ತು ಏಕೆ? ಐತಿಹಾಸಿಕವಾಗಿ ಫಾಸಿಸ್ಟರು ಕಮ್ಯುನಿಸ್ಟರನ್ನು ತಮ್ಮ ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡಿದ್ದರೆಂಬ ಮಾನಸಿಕ ಕಾರಣಕ್ಕಾಗಿ ಇರಬಹುದೆ. ಪಾಸಿಸ್ಟರೆಂದು ಕರೆಯುವಾಗ ಯಾರನ್ನು ಕುರಿತು ಹೇಳುತ್ತಿದ್ದೇವೆ ಎಂಬ ಬಗ್ಗೆ ನಾವು ಸ್ಪಷ್ಟವಾಗಿದ್ದೇವೆಯೇ? ಸಾಮಾನ್ಯ ಜನರಿಗೆ ಅರ್ಥವಾಗದೆ ಇರುವ ಅಥವಾ ಅಪರಿಚಿತವಾಗಿರುವ ಇಂಥ ಶಬ್ದಗಳನ್ನು ಉಪಯೋಗಿಸುವುದನ್ನು ನಿಲ್ಲಿಸುವ ಸಮಯ

ಬಂದಿದೆ. ಕೇವಲ ನಮ್ಮ ಕೃತಕ ಭೌತಿಕ ಮತ್ತು ರಾಜಕೀಯ ಆತ್ಮಾಭಿಮಾನವನ್ನು ಸಂತೈಸುವುದಕ್ಕಾಗಿ ನಡೆದ ಸವಾಾವೇಶದಲ್ಲಿ ಇಂಥ ಶಬ್ದಗಳನ್ನು ಉಪಯೋಗಿಸಿಕೊಳ್ಳಬಹುದೇನೋ. ನಮ್ಮ ರಾಜಕೀಯ ತುರ್ತಿಗಾಗಿ ನಾಯಿಯನ್ನು ತೋಳವೆಂದು ಕೂಗುವುದು ಜಾಣತನವಲ್ಲ (ಬಿಜೆಪಿಯ ಬೆಂಬಲಿಗರನ್ನು ನೋಯಿಸುವ ಇಚ್ಛೇಯಿಲ್ಲ) ನಿಜ ತೋಳ ಬಂದಾಗ ನೀವು ಏನೆಂದು ಕೂಗುವಿರಿ?

ಮಂಗಳೂರಿನಿಂದ ಬಂದಿರುವ ನನ್ನ ಸ್ನೇಹಿತರಾದ ಶ್ರೀ ರಾಜರಾಮ್ ತೋಳ್‌ಪಾಡಿಯರು "ನಮ್ಮ ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿಯ ಸಂಕೀರ್ಣ ಗಂಡಾಂತರವನ್ನು ಫಾಸಿಜಂ ಎಂದು ಕರೆದು ತಪ್ಪು ಮಾಡುತ್ತಿದ್ದೇವೆ" ಎಂದು ಹೇಳಿ ನೆನ್ನೆ ನಡೆದ ಚರ್ಚೆಯಲ್ಲಿ ಒಂದಿಷ್ಟು ಅರ್ಥವನ್ನು ತಂದರೆಂದು ನನ್ನ ಭಾವನೆ.

ತಪ್ಪು ವಿಶ್ಲೇಷಣೆಯು ರೋಗವನ್ನು ಇನ್ನೂ ಹೆಚ್ಚು ಉಲ್ಬಣಗೊಳಿಸುತ್ತದೆ ಎಂದು ನನ್ನ ಯೋಚನೆ. ಇದು ಆಲೋಚನೆ ಮಾಡದೇ ಇರುವ ಮತ್ತು ಕಲಿಯದೆ ಇರುವ ಎಡಪಂಥೀಯರ ಲಕ್ಷಣವಿರಬಹುದು. ಚರ್ಚೆಗಳು ಸಾಂಸ್ಕೃತಿಕ ಆಧಾರದ ಮೇಲೆ ನಡೆಯುವಂತೆ ಮಾಡುವುದಕ್ಕಾಗಿ ಆಗಾಗ್ಗೆ ನೀವು ಮಧ್ಯ ಪ್ರವೇಶಿಸುತ್ತಿರುವುದನ್ನು ನೋಡಿ ನನಗೆ ದುಃಖವಾಯಿತು. ಮೋದಿಯವರ ರಾಜ್ಯವನ್ನು ಹಿಂಸಾಪ್ರವೃತ್ತಿ ಹೊಂದಿರುವ ಹಿಂದೂ ರಾಷ್ಟ್ರೀಯ ಪಕ್ಷದ ರಾಜ್ಯಭಾರವೆಂದು ನಾನು ಕರೆಯಲು ಬಯಸುತ್ತೇನೆ. ಇಂದಿನ ಬಿಜೆಪಿ ಕೂಡ ಆಧುನಿಕ ಪ್ರಜಾತಾಂತ್ರಿಕ ಪ್ರಕ್ರಿಯೆಯ ಉತ್ಪಾದನೆಯಾಗಿರುವುದರಿಂದ ಇಂದಿಲ್ಲಾ ನಾಳೆ ಬಿಜೆಪಿಯಲ್ಲಿ ಆಂತರಿಕ ಮಂಥನ ನಡೆಯುವುದೆಂದು ನಾನು ಆಶಿಸುತ್ತೇನೆ ಕೂಡ. ಆದ್ದರಿಂದ ಈ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಅದು ಆಂತರ್ಯದಲ್ಲಿಯ ತುಮುಲವಿಲ್ಲದೇ ಕಿತ್ತು ಹಾಕಲಾರದು. ಮತದಾರರು ಅರ್ಥೈಹಿಸುವ ರೀತಿಯಲ್ಲಿ ಪ್ರಗತಿಪರರು ಮತ್ತು ಎಡಪಂಥೀಯರು ಎಂದು ಹೇಳಿಕೊಳ್ಳುವ ನಾವು ಶ್ರೀಸಾಮಾನ್ಯರ ಸದಾಭಿಪ್ರಾಯವನ್ನು ಹೊಂದಿಲ್ಲ.

ಇದಕ್ಕೆ ವಿವಿಧ ಕಾರಣಗಳು ಇರಬಹುದು. ಸಂಘ ಪರಿವಾರದ ವೈರುಧ್ಯಗಳು ಹೊರಬರುವವರೆಗೆ ನಮ್ಮ ಸಮಯಕ್ಕಾಗಿ ನಾವು ಕಾಯೋಣ. ೭೦ರ ದಶಕದ ತುರ್ತುಪರಿಸ್ಥಿತಿಯ ಕಾಲದಲ್ಲಿ ಕೂಡ ಫ್ಯಾಸಿಸಂ ಎಂಬ ಕೂಗನ್ನು ಕೇಳಿದ್ದೆವು. ಅಂಥ ಕೂಗನ್ನು ಕೂಗಿದವರು ಹೊಸ ರಾಜಕೀಯ ಪರಿಸ್ಥಿತಿಯಲ್ಲಿ ತಮ್ಮ ಮಹತ್ವ ಮತ್ತು ಸೌಕರ್ಯಗಳನ್ನು ಕಳೆದುಕೊಂಡವಂಥವರಾಗಿದ್ದರು.

ಇದರ ಅರ್ಥ ಈಗ ನಾವು ರಾಜಕೀಯವಾಗಿ ನಿಶ್ಕ್ರಿಯರಾಗಿರ ಬೇಕೆಂದಲ್ಲ. ನನ್ನ ಅಭಿಪ್ರಾಯವೆನೆಂದರೆ ಪರಿಸ್ಥಿತಿಯನ್ನು ಅತಿಶಯೋಕ್ತಿ ಗೊಳಿಸಬಾರದೆಂದೇ ಆಗಿದೆ. ಈ ಮಧ್ಯೆ ಮೋದಿಯವರು ಯಾವ ರೀತಿ ಅಸಾಧಾರಣ ನಾಯಕರಾಗಿ ಉದ್ಭವಿಸಿದರು ಎಂಬ ಬಗ್ಗೆ ನಾವು ವಿವರವಾಗಿ ಮತ್ತು ಸ್ಪಷ್ಟವಾಗಿ ಚರ್ಚಿಸಬೇಕು. ಜನಸಾಮಾನ್ಯರ ಮನೋಭಾವವನ್ನು ಅರ್ಥೈಸಿಕೊಳ್ಳಲು ಮತ್ತು ಅವರನ್ನು ತಲುಪುವ ಮಾರ್ಗವನ್ನು ರಚಿಸಿಕೊಳ್ಳುವಲ್ಲಿ ನಾವು ಅನೇಕ ತಪ್ಪುಗಳನ್ನು ಮಾಡಿದ್ದೇವೆ. ಇನ್ನೂ ನಾವು ಅಂಥದೇ ತಪ್ಪುಗಳನ್ನು ಮಾಡದಿರೋಣ. ಆದರೆ ನಾವು ಅದನ್ನೇ ಮಾಡುತ್ತಿರುವಂತೆ ನನಗೆ ಅನಿಸಿದೆ. ಅಷ್ಟೇ ಅಲ್ಲ ಬೇರೆಯವರು ಕೂಡ ಅದನ್ನೇ ಅನುಸರಿಸುವಂತೆ ಉತ್ತೇಜಿಸುತ್ತಿದ್ದೇವೆ ಎಂದೂ ಅನಿಸುತ್ತದೆ. ಇಂಥ ಕ್ರಿಯೆ ಶಿವಮೊಗ್ಗ ಸಮಾವೇಶದಲ್ಲಿ ನಡೆದಿದೆ. ಎಡಪಂಥೀಯರು ಮತ್ತು ಪ್ರಗತಿಪರರು ತಮ್ಮ

ಪೂರ್ವಗ್ರಹ ಪೀಡಿತ ಹಿರಿತನದ ಭಾವನೆಯನ್ನು ಮತ್ತು ನಿಮಿಗಿಂತಲೂ ನಾವು ಉತ್ತಮ ಎಂಬ ಧೋರಣೆ ಬಿಡಬೇಕಾದ ಕಾಲ ಬಂದಿದೆ. ಪರ್ಯಾಯ ರಾಜಕಾರಣವನ್ನು ಹುಡುಕಿ ಹೊಸ ಸಾಂಸ್ಕೃತಿಕ ರೀತಿಯನ್ನು ಕಂಡುಕೊಳ್ಳಬೇಕೆಂದು ಬಂದಿದ್ದವರಿಗೆ ಸಂಪೂರ್ಣವಾಗಿ ನಿರಾಶೆಯಾಯಿತು. ಸಮಾವೇಶದಲ್ಲಿ ಮೋದಿ ಮತ್ತು ಬಿಜೆಪಿ ವಿರುದ್ಧದ ಗದ್ದಲದ ಮಾತುಗಳಲ್ಲಿ ವಿವೇಕಯುಕ್ತ ಧ್ವನಿಗಳು ಕೂಡ ಅಡಗಿ ಹೋದವು. ತತ್ಪರಿಣಾಮವಾಗಿ ಸಮಾವೇಶದ ಉದ್ದೇಶ ದಾರಿ ತಪ್ಪಿತು.

ನಾನು ನಂಬಿಕೆಯಿಂದ ಲೋಹಿಯಾವಾದಿ. ಆದ್ದರಿಂದ ಸಾಧ್ಯ-ಸಾಧನಾ ಶುದ್ಧೀಯ ಗಾಂಧೀಜಿಯವರ ಕಲ್ಪನೆಯಲ್ಲಿ ನನ್ನ ನಂಬಿಕೆ ಇದೆ. ನೆನ್ನೆ ನಡೆದ ಚರ್ಚೆಯಲ್ಲಿ ಮಾರ್ಕ್, ಗ್ರಾಮ್ಸಿ, ಭೋನ್ಸ ಕೀ, ಪುಕೋಸ್, ಗೂಗೀಸ್ ಮತ್ತು ಬಿಲಿಗ್ರಾಮೀಸ್ ಮುಂತಾದವರ ಹೆಸರುಗಳು ವಿಜೃಂಭಿಸಿದವು. ಆದರೆ ಗಾಂಧೀಯವರು ಇರಲಿಲ್ಲ.

ಪುನಃ/-

೧. ಬಹುಪಕ್ಷೀಯ ರಾಜಕೀಯ ವ್ಯವಸ್ಥೆಯಲ್ಲಿ ಮತ್ತು ಸ್ವಾಯತ್ತ ಹಾಗೂ ಸಧೃಡ ಚುನಾವಣಾ ಆಯೋಗ ಇರುವಂಥ ಆಡಳಿತ ವ್ಯವಸ್ಥೆಯಲ್ಲಿ ಒಂದು ರಾಜ್ಯ ವ್ಯವಸ್ಥೆಯನ್ನು ನೀವು ಫ್ಯಾಸಿಸಂ ಎಂದು ಹೇಗೆ ಹಣೆಪಟ್ಟಿಕಟ್ಟುತ್ತೀರಿ? ಅದು ಕೂಡ

ಕೆಲವೇ ದಿನಗಳ ಹಿಂದೆ ಸಂವಿಧಾನಾತ್ಮಕವಾಗಿಯೂ, ಪ್ರಜಾತಾಂತ್ರಿಕವಾಗಿಯೂ ಚುನಾವಣೆ ನಡೆದಿರುವಾಗ ಆ ಚುನಾವಣೆಯಲ್ಲಿ ಬಿಜೆಪಿ ಮತ್ತು ಅಕಾಲಿಗಳ ಸಂಘಟನೆಯನ್ನು ಸೋಲಿಸಿ ಕಾಂಗ್ರೇಸ್ ಪಕ್ಷ ಬಹುಮತದಲ್ಲಿ ಬಂದದ್ದು ಹೇಗೆ. ಬಿಜೆಪಿ ಮತ್ತು ಅಕಾಲಿಗಳಿಗೆ ಅಸೆಂಬ್ಲಿಯಲ್ಲಿ ವಿರೋಧ ಪಕ್ಷದ ಸ್ಥಾನವೂ ಸಿಗಲಿಲ್ಲವಲ್ಲ! ರಾಜಕೀಯ ವೈರಿಯನ್ನು ದೂಷಿಸುವಾಗಲು ಕೂಡ ನಾವು ನಮ್ಮ ವೈಚಾರಿಕತೆಯ ಸಮತೋಲನವನ್ನು ಕಾಪಾಡಬೇಕೆಂದು ನನ್ನ ಅನಿಸಿಕೆ. ಪಕ್ಷಾತೀತ ಜನರ ವಿಶ್ವಸಾರ್ಹತೆಯನ್ನು ಪಡೆಯುವುದಕ್ಕಾಗಿ ಕೂಡ ಇದು ಅಗತ್ಯ. ನಾವು ವ್ಯವಹಾರಿಕರಾಗಿ ಕೂಡ ಆಗೋಣ.

೨. ದಕ್ಷಿಣಾಯನದ ಶಿವಮೊಗ್ಗ ಸಮಾವೇಶ ಮತ್ತು ಆರ್.ಎಸ್.ಎಸ್ ನಲ್ಲಿ ಒಂದು ಸಮಾನ ಅಂಶವಿತ್ತೆಂದು ತೋರುತ್ತದೆ. ಅದು ಗಾಂಧಿಯವರ ಬಹಿಷ್ಕಾರ.

ಶಿವಮೊಗ್ಗ ಸಮಾವೇಶದ ಮೊದಲು ಪ್ರಕಟಿಸಿದ್ದ ನಿವೇದನೆ ನಿಮ್ಮ ಮಾತುಗಳನ್ನು ಸ್ಪಷ್ಟಪಡಿಸಿದವು ಮತ್ತು ಸಮಾವೇಶದ ಸಮಾಲೋಚನೆಗಳನ್ನು ಹೆಚ್ಚು ಸ್ಪಷ್ಟವಾಗುವಂತೆ ಮಾಡಿದವು. ಗಾಂಧೀಜಿಯವರ ಬಗ್ಗೆ ಒಂದೆರಡು ಬಾರಿ ಮಾತನಾಡಿದ ನೀವು ಈ ಆಂದೋಲನಕ್ಕೆ ಮಾಗದರ್ಶನ ನೀಡಿದರೆ, ಸಕಾಲಕ್ಕೆ ಮಧ್ಯಪ್ರವೇಶಿಸಿದರೆ ಈ ಆಂದೋಲನದ ಚರ್ಯೆ ಗೊತ್ತಾಗಬಹುದು.

ಪ್ರಿಯನಾಗಾಭೂಷಣ್‌ಜಿ.

೧೦/೦೪/೨೦೧೭

ನಿಮ್ಮ ಕಾಗದಕ್ಕಾಗಿ ನಾನು ಆಭಾರಿ, ಏಕೆಂದರೆ ನಿಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿದ್ದಕ್ಕಾಗಿ. ಎರಡನೇಯ ಕಾರಣ ಯಾವುದರ ಬಗ್ಗೆ ನಾನು ಸಂಪೂರ್ಣ ಜಾಗೃತನಾಗಿರಲಿಲ್ಲವೋ ಅದರ ಕಡೆಗೆ ನನ್ನ ಗಮನ ತಂದದ್ದಕ್ಕಾಗಿ.

ನನ್ನ ಗುರುಗಳಾದ ಶಾಂತಿನಾಥ ದೇಸಾಯಿಯವರ ಮೂಲಕ ನನಗೆ ಲೋಹಿಯಾರವರ ವಿಚಾರದ ಪರಿಚಯವಾಯಿತು ಮತ್ತು ೭೦ರ ದಶಕಗಳಲ್ಲಿ ಲೋಹಿಯಾರವರ ವಿಚಾರಗಳ ಪ್ರಸ್ತುತತೆಯ ಅರಿವಾಯಿತು. ದಕ್ಷಿಣಾಯನವು ಪಕ್ಷೇತರ ವಿದ್ಯುಮಾನವಾಗಿರಬೇಕೆಂಬುದು ನನ್ನ ಅಭಿಪ್ರಾಯ. ನನಗೆ ಸ್ವಂತ ಯಾವುದೇ ಪಕ್ಷದ ಸಂಬಂಧ ಇಲ್ಲ. ನನ್ನ ಮೂಲ ಬದ್ಧತೆ ಇರುವುದು ಭಾರತೀಯ ಭಾಷೆಗಳೊಂದಿಗೆ. ಸಾರ್ವಜನಿಕ ಕಾರ್ಯಗಳಲ್ಲಿ ಪ್ರತಿಯೊಂದು ಘಟನೆಗಳ ಬಗ್ಗೆ ದೃಷ್ಟಿಯಿಡುವುದು ಕಷ್ಟವಾಗುತ್ತದೆ. ಆದರೂ ಕೂಡ ಭವಿಷ್ಯದಲ್ಲಿ ನೀವು ಸೂಚಿಸಿದ ಚಿಂತನೆಯನ್ನು ಗಮನದಲ್ಲಿರಿಸಿಕೊಳ್ಳುವೆ.

ಗೌರವದೊಂದಿಗೆ,

ಜಿ.ಎಸ್. ದೇವಿ

ಗಾಂಧಿ: ತುರ್ತು ಮತ್ತು ಅನಿವಾರ್ಯ

{ಡಾ॥ ರಾಜಶೇಖರ್ ಮಠಪತಿ (ರಾಗಂ) ಅವರು ಬರೆದಿರುವ ಗಾಂಧಿ: ಅಂತಿಮ ದಿನಗಳು ಎಂಬ ಪುಸ್ತಕದ ಪರಿಚಯ ಗೋವಿಂದರಾಜು ಲಕ್ಷ್ಮೀಪುರರವರು ಮಾಡಿಕೊಟ್ಟಿದ್ದಾರೆ. ಗಾಂಧಿಯವರ ಬಗ್ಗೆ ಮತ್ತೆ ಮತ್ತೆ ಓದುವಂತೆ (ರಾಗಂ) ಮಾಡಿದ್ದಾರೆ. } –ಸಂ

ನಾವು ಬದುಕುತ್ತಿರುವ ಇಂದಿನ ಸಮಾಜ ದಾರಿ ತಪ್ಪುವ ಹಂತ ತಲುಪಿದೆ. ನಡೆವ ದಾರಿ ನಿಚ್ಚಳವಾಗಿಲ್ಲ. ದಾರಿ ಯಾವುದಯ್ಯ ಎನ್ನುವ ಸ್ಥಿತಿ. ನೀತಿ ಸಿದ್ಧಾಂತಗಳು ಬಿರುಗಾಳಿಗೆ ಸಿಕ್ಕು ನಲುಗುತ್ತಿವೆ. 'ಅಲ್ಲಾಹ್ ಓ ಅಕ್ಬರ್' ಎಂಬ ಮಸೀದಿಯಿಂದ ಹೊರಡುವ ಆಲಾಪ ಬಡಿದೆಚ್ಚರಿಸಿ ಕರ್ತವ್ಯದ ಹಾದಿ ತೋರುವಂತೆ ದಾರಿ ತೋರುವ ದಾರಿ ದೀಪವೊಂದು ಬೇಕಿದೆ. ಬದುಕು ಕತ್ತಲು. ನಿಜಕ್ಕೂ ಕಲ್ಲು ಕರಗೋ ಸಮಯ!

ಇಂತಹ ಹೊತ್ತಿನಲ್ಲಿ ನಮಗೆ ನಮ್ಮನ್ನು ಸರಿ ದಾರಿಯಲ್ಲಿ ನಡೆಸಬಲ್ಲ ನಾಯಕ ಬೇಕೆನಿಸಿದರೆ ಅದು ಸುಳ್ಳಲ್ಲ. ಕಾಕತಾಳೀಯವಲ್ಲ. ಗಾಂಧೀಯಂತಹ ದೇಶ ಕಟ್ಟಿದ ನಾಯಕರು ನೆನಪಾಗುತ್ತಾರೆ. ಭೌತಿಕವಾಗಿ ಭೂತದ ಕಾಲಗರ್ಭದಲ್ಲಿ ಗತಿಸಿರುವ ಗಾಂಧಿ ವರ್ತಮಾನದಲ್ಲೂ ತನ್ನ ಅನುಪಸ್ಥಿತಿಯನ್ನು ಕಾಡುವಂತೆ ಮಾಡಿರುವುದು ಅವನಲ್ಲಿದ್ದ ಸಮಾಜಮುಖೀ ನೀತಿ ಸಿದ್ಧಾಂತ ಎಂಬುದು ಸತ್ಯ. ಆದರೆ ಗಾಂಧಿ ದೇವರಲ್ಲ, ಹುಲುಮಾನವ, ತಪ್ಪು ಮಾಡಿ, ಅದನ್ನು ಸರಿ ಮಾಡಿಕೊಂಡು ಇದು ಬದ್ಧತೆಯ 'ಬುದ್ಧಮಾರ್ಗ' ಎಂದು ತೋರಿಸಿದವ. ಹಾಗೇ ಮಹಾತ್ಮನಾದವ.

ಗಾಂಧಿ ಸದಾ ಚರ್ಚೆಗೆ ಒಳಗಾಗುವ ವ್ಯಕ್ತಿ. ಕಾಲನ ಪರಿಕ್ಷೆಗೆ ಒಳಗಾಗುವ ವ್ಯಕ್ತಿತ್ವ, ಗಾಂಧಿಯ ತತ್ವ ಒಪ್ಪುವ ಮನಸ್ಸುಗಳು ಅವರ ಸರಳತೆ, ಸತ್ಯ, ನಿಷ್ಠೆ ದೇಶಕ್ಕಾಗಿ ಮಾಡಿದ ಸೇವೆ ಮುಂದುಮಾಡಿದರೆ, ತಿರಸ್ಕರಿಸುವ ಮನಗಳು ದೇಶದೊಳಗಿನ ಐಕ್ಯತೆಯನ್ನು ಸಾಧಿಸುವಲ್ಲಿ, ಆಂತರಿಕ ಅಸಮತೋಲನ ಹೋಗಲಾಡಿಸುವಲ್ಲಿ ಮಾಡಬಹುದಾಗಿದ್ದ ಸಂದರ್ಭದಲ್ಲಿಯೂ ತನ್ನ ಕರ್ತವ್ಯ ಮರೆಯಲಿಲ್ಲ ಎಂಬುದು. ಹೀಗೆ ಗಾಂಧಿಯ ಬದುಕೇ ತೆರೆದ ಪುಸ್ತಕ. ವಿಮರ್ಶೆಗೆ ಸದಾ ತೆರೆದುಕೊಂಡಿದೆ.

ತೀರಾ ಇತ್ತೀಚಿನ ಬೆಳವಣಿಗೆ ನೋಡಿ: ಸಮಾಜಿಕ ಅನಿಷ್ಟ, ಅನೀತಿ, ಅಧರ್ಮ ಮತ್ತು ಸಮಾಜ ವಿರೋಧಿ ನಿಲುವುಗಳ ವಿರುದ್ಧ ಸಮಾಜದಲ್ಲಿ

ಒಂದು ದನಿ ಏಳುತ್ತದೆ. ಅದು ಗಟ್ಟಿಯಾಗಿ ನೆಲೆ ಊರಿ ಒಟ್ಟು ಧ್ವನಿಯಾಗಿ ರೂಪುಗೊಳ್ಳುವ ಹೊತ್ತಿಗೆ ದನಿ ಎತ್ತಿ ಮುನ್ನಡೆವ ವ್ಯಕ್ತಿಯ ವೈಯಕ್ತಿಕ ನೆಲೆಯಲ್ಲಿ ತೇಜೋವಧೆ, ಅವನ ನಿಷ್ಠೆ ಕುರಿತ ಸಂಶಯ, ನಿಯತ್ತಿನ ಬಗ್ಗೆಯೇ ಪ್ರಶ್ನೆ ಏಳುತ್ತದೆ. ದನಿಗೆ ದನಿ ಕೂಡಿ, ಒಂದು ಸಮೂಹ ಒಟ್ಟುಗೂಡಿ, ಹೋರಾಟವಾಗಿ ಒಂದು ತಾತ್ವಿಕ ಹಂತ ತಲುಪುವ ಮುಂಚೆಯೇ ಹೋರಾಟದ ಗರ್ಭಪಾತವಾಗುತ್ತದೆ. ಆದರೆ ಗಾಂಧಿ ಬದುಕಿದ್ದ ಕಾಲ ಘಟ್ಟದಲ್ಲಿ ಹಾಗಿರಲಿಲ್ಲ. ಹಿಡಿದ ಕೆಲಸ ಮಾಡುವಲ್ಲಿ ಬೆಂಬಲ ಇರುತ್ತಿತ್ತು. ಉಳಿದ್ದದ್ದು ಆ ಅನಂತರದ ಮಾತು. ಹಾಗಾಗಿಯೇ ಗಾಂಧಿಕಾಲ ಮತ್ತು ಗಾಂಧಿ ಒಮ್ಮೆಲೆ ಮರುಕಳಿಸುತ್ತದೆ.

ಗಾಂಧಿಯೇ ತನ್ನ ಕುರಿತು ಮೈ ಎಕ್ಸಪರಿಮೆಂಟ್ ವಿದ್ ಟ್ರುಥ್‌ನಲ್ಲಿ ಎಲ್ಲವನ್ನು ಹೇಳಿದ್ದಾರೆ. ಆದರೆ ಗಾಂಧಿ ಕಾಲನ ಪರೀಕ್ಷೆಗೆ ಸದಾ ಒಳಗಾಗುವ ವ್ಯಕ್ತಿ. ಸತ್ತ ಎಷ್ಟೋ ದಿನಗಳ ಅನಂತರವೂ ಗಾಂಧಿಯ 'ಪೋಸ್ಟ್ ಮಾರ್ಟಂ' ನಡೆಯುತ್ತದೆ. ಕೃತಿಗಳ ಮೂಲಕ. ಗಾಂಧಿ ವ್ಯಕ್ತಿತ್ವದ ಕುರಿತ ಕೃತಿಗಳು ಹಲವು. ಹೊಸ ಸೇರ್ಪಡೆ ಡಾ. ರಾಜಶೇಖರ ಮಠಪತಿ (ರಾಗಂ) ಅವರ ಗಾಂಧಿ ಅಂತಿಮ ದಿನಗಳು ಕೃತಿ. ಈಗಾಗಲೇ ಈ ಭಾನುವಾರ ವಾರಪತ್ರಿಕೆಯಲ್ಲಿ ಪ್ರತೀವಾರ ಅಂಕಣವಾಗಿ ಧಾರವಾಹಿಯ ರೂಪದಲ್ಲಿ ಪ್ರಕಟವಾಗಿರುವ ಲೇಖನಗಳ ಸಂಕಲನವನ್ನು ಬೆಂಗಳೂರಿನ ಕಣ್ವ ಪ್ರಕಾಶ್ ಹೊರ ತಂದಿದೆ. ಚರ್ಚಿತವಾಗುತ್ತಲೇ ಇರುವ ಗಾಂಧಿಯ ಕುರಿತು ಏನಿರಬಹುದು ಎನ್ನುವ ಆಸಕ್ತಿ ಕೆರಳಿಸುವ ಪುಸ್ತಕದ ಶೀರ್ಷಿಕೆ ಅದನ್ನು ಕೊನೆವರೆಗೂ ಉಳಿಸಿಕೊಳ್ಳುತ್ತದೆ. ಒಳಪುಟಗಳಲ್ಲಿನ ಒಂದೊಂದು ಬಿಡಿ ಅಧ್ಯಾಯದ ಶೀರ್ಷಿಕೆಗಳು ಸೆಳೆಯುತ್ತವೆ.

ಗಾಂಧಿಯೆಡೆಗೆ ಸಾಮಾನ್ಯ ವ್ಯಕ್ತಿಗೆ ಇರುವ ಕುತೂಹಲದಂತಹ ಕುತೂಹಲವನ್ನು ಇಟ್ಟುಕೊಂಡೇ ಬರೆಯಲು ತೊಡಗಿರುವ ಲೇಖಕ ರಾಗಂ ಅದನ್ನು ಅಂತ್ಯದವರೆಗೂ ಹಾಗೆ ಕಾಪಿಟ್ಟುಕೊಂಡಿದ್ದಾರೆ. ಪ್ರತೀ ಅಧ್ಯಾಯವೂ ಕುತೂಹಲವನ್ನು ಕಾಯ್ದುಕೊಂಡು ಓದಿಸಿಕೊಳ್ಳುತ್ತದೆ. ಕೇವಲ ಓದಿಸಿಕೊಂಡ ಮಾತ್ರಕ್ಕೆ ಅದು ಉಲ್ಲೇಖಾರ್ಹವಲ್ಲ. ಅದರಲ್ಲಿ ಗಾಂಧಿ ಕುರಿತು ತಮ್ಮದೇ ಆದ ಗೊಂದಲಗಳನ್ನು, ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ ವಿಮರ್ಶೆಗೆ ಹಚ್ಚುತ್ತಾರೆ. ಬೇರೆ ಬೇರೆ ವ್ಯಕ್ತಿಗಳು ಗಾಂಧಿಯನ್ನು ಭಿನ್ನವಾಗಿ ಹೇಗೆಲ್ಲಾ ಜರಡಿಯಲ್ಲಿ ಹಿಡಿದಿದ್ದಾರೆ ಎಂಬುದನ್ನು ತಮ್ಮದೇ ನೇರ ಮಾತುಗಳಲ್ಲಿ ದಾಖಲಿಸಿದ್ದಾರೆ. ಕಥನ ಶೈಲಿಯ ಬರೆವಣಿಗೆ ಮನಸ್ಸಿಗೆ ನಾಟುವಂತೆ ಸಾಗುತ್ತದೆ. ವಿಷಯದ ಕುತೂಹಲಕ್ಕೆ ಕೊಕ್ಕೆ ಆಗಿಲ್ಲ. ಹರಿವ ನೀರಂತೆ ಸಲೀಸು.

ನಮಗೆಲ್ಲ ಈಗಾಗಲೇ ತಿಳಿದಿರುವ 'ಸತ್ಯಕಥೆಯ'ಯನ್ನು ಮತ್ತೆ ಹೇಳುವಾಗ

ಅದರೊಳಗೆ ವಿಶೇಷ ಏನಾದರು ಇರಬೇಕು ಅದನ್ನು ಕಥನ ಶೈಲಿಯಲ್ಲಿ ಸಾಧಿಸಿದ್ದಾರೆ ಲೇಖಕರು. 'ಕೊನೆಯ ದಿನಗಳು' ಎನ್ನುತ್ತಲೇ ಗಾಂಧಿಯ ಇಡೀ ಜೀವನಗಾಥೆಯ ಪುನರ್ನೋಟಕ್ಕೆ ಅನುವು ಮಾಡಿಕೊಡುತ್ತದೆ. ಇಂಥದನ್ನು ಮುಚ್ಚಿಟ್ಟು ಇಂಥದನ್ನು ಬಿಚ್ಚಿಡಬೇಕು ಎನ್ನುವ ಗೋಜಿಗೆ ಹೋಗದೆ ಚಸ್ಮಾರಹಿತ ನೋಟದಲ್ಲಿ ಕೃತಿ ಹೆಣೆದಿರುವ ರೀತಿಯ ಹಿಂದೆ ಹಲವಾರು ಕೃತಿಗಳು ಹೆಗಲು ಕೊಟ್ಟಿವೆ. "ಮಾಗಿದ ಮನಸ್ಸೊಂದು ಕ್ರಿಯಾಶೀಲವಾಗಿದ್ದ ರೀತಿಯನ್ನು ತಿಳಿಯುವುದಷ್ಟೆ ನನ್ನ ಬರೆಹದ ಕುತೂಹಲ ಮತ್ತು ಗುರಿ ಎಂದು ವಿನಮ್ರವಾಗಿ ಹೇಳುವ ಲೇಖಕರು" ಗಾಂಧಿ ಓದಿದ್ದು ಕಡಿಮೆ. ಆದರೆ ಅರ್ಥೈಸಿಕೊಂಡದ್ದು ಹೆಚ್ಚು. ಮತ್ತೊಂದಷ್ಟು ಓದಿದ್ದರೂ ಅದು ಅವನ ಆಗಾಗಿನ ಅವಶ್ಯಕತೆಗಳ ಹಿನ್ನಲೆಯಲ್ಲಿ. ಹಾಗೆಯೇ ಓದಿದ್ದೆಲ್ಲವನ್ನು ಆತ ಹಂಚಿಯೂ ಬಿಟ್ಟ, ಬರೆಹದ ವಿಚಾರದಲ್ಲೂ ಅಷ್ಟೇ, ಕಾಲಾತೀತವಾಗಿ ಹಲವು ತಲೆಮಾರುಗಳಿಂದ ಬರೆಹದ ಒರಗೆ ತುತ್ತಾದ ಗಾಂಧಿ ಸಾಹಿತ್ಯ ಬರೆಯಲಿಲ್ಲ. ಆದರೆ ಆತ ಬರೆದಿದ್ದೆಲ್ಲವೂ ಸಾಹಿತ್ಯವಾಯಿತು. ಮೆಲುಕು ಹಾಕಬೇಕಾದ ಸಾಹಿತ್ಯವಾಯಿತು. ಬಹುತೇಕ ಗಾಂಧಿಯಷ್ಟು ಕಡಿಮೆ ಓದಿದ ರಾಜಕೀಯ ನೇತಾರರು ವಿರಳ. ಹಾಗೆಯೇ ಗಾಂಧಿ ಅಂಥ ಮನುಷ್ಯ ಕೂಡ ಎಂದು ಹೇಳುತ್ತಾ ಭಿನ್ನಾವಾಗುತ್ತಾರೆ. ಇಲ್ಲಿ ರೋಚಕತೆ ಹುಡುಕುವ ಬದಲು ಪ್ರಜ್ಞೆಯ, ಸಿದ್ಧಾಂತದ ಬದ್ಧತೆಯ ಕುರಿತಂತೆ ಹೆಚ್ಚು ಬಾಯಾಗುತ್ತಾರೆ.

ಸಾಂಸ್ಕೃತಿಕ ಲೋಕದಲ್ಲಿ, ಅದರಲ್ಲೂ ವಿಶೇಷವಾಗಿ ಸಿನೆಮಾ, ಬರೆಹ ಇಂತಹ ಮಾಧ್ಯಮಗಳಲ್ಲಿ ಸಮಾಜಮುಖಿ ನಾಯಕರಾದ ಬುದ್ಧ, ಬಸವ, ಅಂಬೇಡ್ಕರ್‌ರ ಜೀವನ ದರ್ಶನ ಪುನರ್ಮುಖಾಮುಖಿಯ ಪ್ರಯೋಗಗಳ ಮಹಾಪೂರವೆ ಆಗುತ್ತಿರುವುದು ಈ ದಿನಮಾನದ ವಿಶಿಷ್ಟ ಪದರು. ಇತಿಹಾಸವನ್ನು ಪುನರ್ನವೀಕರಣ ಮಾಡುತ್ತ ವರ್ತಮಾನದ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳುವ ಪ್ರಕ್ರಿಯೆ. ಹಾಗೆಯೇ, ಗಾಂಧಿಯ ಪ್ರಭಾವವಲಯದಲ್ಲಿಯೇ ಬೆಳೆದು ಅನಂತರ ಗಾಂಧಿತತ್ವವನ್ನು ವಿನಯವಾಗಿ ಒಪ್ಪಿಕೊಳ್ಳುತ್ತಲೇ ನಯವಾಗಿ ವಿರೋಧಿ ನೆಲೆಯಲ್ಲಿ ನೋಡಿದ ಓಶೋ ಮತ್ತು ಖ್ವಾಜಾ ಅಹಮದ್ ಅಬ್ಬಾಸ್‌ರಂತಹ ಇಬ್ಬರು ವ್ಯಕ್ತಿಗಳ ಒಳ ತೋಟಿಗಳನ್ನು ಕಟ್ಟಿಕೊಡುತ್ತಾರೆ ರಾಗಂ.

ಸ್ವಾತಂತ್ರ್ಯ ಹೋರಾಟದ ನೇತಾರನಾಗಿ, ರಾಜಕಾರಣಿಯಾಗಿ, ಗಾಂಧಿಯನ್ನು ಚಿತ್ರಿಸಿದ ಸಾಹಿತ್ಯದೊಂದಿಗೆ, ಅವರನ್ನು ಧರ್ಮನಿಷ್ಠ, ಸಾತ್ವಿಕ, ಸಂತನಾಗಿ ಕಾಣುವ ಹಲವು ಕೃತಿಗಳು ಸಾಹಿತ್ಯದಲ್ಲಿ ದೊರಕುತ್ತವೆ. ಕನ್ನಡದಲ್ಲಿಯೂ ಒಂದಷ್ಟು ಇವೆ. ಆದರೆ ಈ ಎರಡು ನೆಲೆಗಳನ್ನು

ಸಮನ್ವಯಿಸಿಕೊಳ್ಳುವ ಮಹಾತ್ಮನನ್ನು ಅಪ್ಪಟ ಮಾನವನನ್ನಾಗಿ ಚಿತ್ರಿಸಿರುವ ಕೃತಿಗಳು ಅಪರೂಪ. ಮೊದಲಿನ ಎರಡು ನೆಲೆಗಳು ಬೌದ್ಧಿಕ ಜಿಜ್ಞಾಸೆಯಿಂದ, ಸಿದ್ಧಾಂತಗಳ ಭಿತ್ತಿಯಲ್ಲಿ ರೂಪುಗೊಳ್ಳುತ್ತವೆ. ಅವುಗಳ ಓದು ನಮ್ಮ ಬುದ್ಧಿಯನ್ನು ಪ್ರವೇಶಿಸುತ್ತವೆ ಅಷ್ಟೇ. ಅಂತಹ ಗಾಂಧಿಯನ್ನು ನಮ್ಮವನನ್ನಾಗಿಸುವುದು ಹೃದಯವೇ ಮುಖ್ಯವಾದ ಬರವಣಿಗೆ. ಅಂತಹ ಬರೆವಣಿಗೆ ರಾಗಂ ಅವರದು ಎನ್ನುತ್ತಾರೆ ಮುನ್ನುಡಿ ಬರೆದಿರುವ ನಾಟಕಕಾರ ಎಚ್.ಎಸ್.ಉಮೇಶ್. ಈ ಸಾಲುಗಳು ಲೇಖಕರು ವೈಚಾರಿಕ ವಿಷಯ ವಸ್ತುವನ್ನು ಮನಮುಟ್ಟುವಂತೆ ಹೇಳುವಲ್ಲಿ ಇರುವ ಸವಾಲನ್ನು ಸಮಾನವಾಗಿ ಸಾಧಿಸಿರುವ ಕುರಿತು ಪುಷ್ಟೀಕರಿಸುತ್ತವೆ.

ಪುಸ್ತಕದ ಹೂರಣವನ್ನು ಲೇಖಕ, ವಿಮರ್ಶಕ ಜಿ.ಎಸ್. ಅಮೂರ ಹೀಗೆ ಕರೆದಿದ್ದಾರೆ. ಅವರ ಈ ಮಾತುಗಳು ಇಡೀ ಪುಸ್ತಕದ ತಿರುಳು ಎನ್ನಲಡ್ಡಿಯಿಲ್ಲ: ಇತಿಹಾಸದಲ್ಲಿ ಗಾಂಧೀಯ ಹೆಸರು ರಾಷ್ಟ್ರಪಿತನೆಂದೇ ದಾಖಲಾಗಿದೆ. ಆದರೆ, ಅವನು ತನ್ನ ಕೊನೆಯ ದಿನಗಳನ್ನು ದುಃಖದಲ್ಲಿಯೇ ಕಳೆದ. ಬದುಕಿನುದ್ದಕ್ಕೂ ಅವನು ನಂಬಿಕೊಂಡು ಬಂದಿದ್ದ ಆದರ್ಶಗಳು ತನ್ನೆದುರಿಗೆ ನಷ್ಟವಾಗುತ್ತಿದ್ದುದನ್ನು ನೋಡುವ ದೌರ್ಭಾಗ್ಯ ಅವನದಾಯಿತು. ಅವನ ಕಣ್ಣೆದುರಿಗೇ ದೇಶದ ವಿಭಜನೆಯಾಯಿತು. ತನ್ನ ಸರ್ವಸ್ವವನ್ನು ಪಣಕ್ಕಿಟ್ಟು ಸಾಧಿಸಲು ಹೋರಾಡಿದ ಹಿಂದು-ಮುಸ್ಲಿಂ ಐಕ್ಯ ಕನಸಿನಂತೆ ಕರಗಿ ಹೋಯಿತು. ಅಹಿಂಸೆಯಲ್ಲಿಯೇ ಸತ್ಯವನ್ನು ಕಂಡ ದಾರ್ಶನಿಕನನ್ನು, ಹಿಂದೆಂದೂ ನೋಡದ ಹಿಂಸೆಯ ಕೃತ್ಯಗಳು ಕಂಗೆಡಿಸಿದೆವು. ಬಾಪು ಎಂಬ ಹೆಸರಿನಿಂದ ಜನಮಾನಸದಲ್ಲಿ ನೆಲೆಯೂರಿದವ ಈಗ ಏಕಾಂಗಿಯಾದ. ಇದೊಂದು ದುರಂತ ನಾಟಕವಲ್ಲದೆ ಮತ್ತೇನು? ಗಾಂಧೀಯನ್ನು ಕುರಿತ ಅವರ ಮಾತುಗಳಲ್ಲಿ ಗುಲಗಂಜಿ ಗಾತ್ರದಷ್ಟೂ ಸತ್ಯವಿಲ್ಲ.

ಗಾಂಧಿಯ ಮತ್ತೆ ಮತ್ತೆ ಓದಿಗೆ ರಾಗಂ ಹಾತೊರೆಯುವಂತೆ ಮಾಡಿದ್ದಾರೆ.

ಸಾಭಾರ

(ಅರುಹು-ಕುರುಹು ಸಂಚಿಕೆ ೧೪)

ಸಿದ್ಧಗಂಗೆಯ ಸಿದ್ಧಿ ಪುರುಷ

– ಬನ್ನೂರು ಕೆ. ರಾಜು

[ಕರ್ನಾಟಕ ಸಂತ ಮತ್ತು ನಡೆದಾಡುವ ದೇವರಾಗಿ ನಮ್ಮ ಮಧ್ಯೆ ಇರುವ ನೂರಹತ್ತು ವಯೋಮಾನದ ಶ್ರೀ ಶಿವಕುಮಾರ ಸ್ವಾಮೀಜಿಯವರ ಪಾವನ ಜೀವನದ ಸಂಕ್ಷಿಪ್ತ ಪರಿಚಯ ಇಲ್ಲದೆ.]–ಸಂ

ಅರವತ್ತು–ಎಪ್ಪತ್ತರ ದಶಕದ ಮಧ್ಯಭಾಗ ಅಂತ ಕಾಣುತ್ತದೆ. ನಿಜಲಿಂಗಪ್ಪ ನಾಡಿನ ಮುಖ್ಯಮಂತ್ರಿಗಳಾಗಿದ್ದ ಕಾಲವದು. ಆಗೊಮ್ಮೆ ಕರ್ನಾಟಕಕ್ಕೆ ಬರಗಾಲ ಬಂದಿರುತ್ತದೆ. ಬಡಜನತೆಗೆ ತುತ್ತು ಕೂಳಿಗೂ ಪರದಾಡುವಂತಹ ಕಷ್ಟದ ದಿನಗಳವು. ಹಸಿದ ಹೊಟ್ಟೆಗಳನ್ನೊತ್ತ ಬಡಜನರು ಅನ್ನಕ್ಕಾಗಿ ಬಾಯ್ಬಿಟ್ಟುಕೊಂಡು ತಂಡೋಪತಂಡವಾಗಿ ಮಠವೊಂದರ ಮುಂದೆ ಜಾತ್ರೆಯಂತೆ ಜಮಾಯಿಸಿರುತ್ತಾರೆ. ಆದರೆ ಇವರನ್ನು ಕಂಡು ಅಲ್ಲಿನ ಸ್ವಾಮೀಜಿ ಕಿಂಚಿತ್ತೂ ಬೇಸರಿಸಿಕೊಳ್ಳದೆ ಸ್ವತಃ ತಾವೇ ನಿಂತು ಊಟದ ಜೊತೆಗೆ ಆಶ್ರಯವನ್ನೂ ನೀಡಿ ಮಠದ ಮಕ್ಕಳೊಡನೆ ಆ ಬಡಜನತೆಯನ್ನು ಸಲಹತೊಡಗುತ್ತಾರೆ. ಒಂದು ಮಧ್ಯಾಹ್ನ ಉರಿಬಿಸಿಲನ್ನೂ ಲೆಕ್ಕಿಸದೆ ಬರಿಗಾಲಲ್ಲೇ ನಿಂತು ಸರದಿಯಲ್ಲಿದ್ದ ಆ ಬಡಜನರಿಗೆ ಊಟ ನೀಡುವ ಉಸ್ತುವಾರಿಯನ್ನು ಮಠದ ಸ್ವಾಮೀಜಿ ನಿರ್ವಹಿಸುತ್ತಿರುತ್ತಾರೆ. ಈ ಮಠ ಮತ್ತು ಅಲ್ಲಿನ ಸ್ವಾಮೀಜಿ ಬಗ್ಗೆ ಮಾಹಿತಿ ತರಿಸಿಕೊಂಡು ಅಲ್ಲಿಗೆ ಡಿಢೀರನೆ ಭೇಟಿ ನೀಡಿದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು ಅಲ್ಲಿನ ದೃಶ್ಯ ಕಂಡು ಬೆರಗಾಗಿ "ಅಬ್ಬಾ ಎಂಥಾ ದಾಸೋಹ !" ಎಂದು ಹೃದಯ ತುಂಬಿ ಉದ್ಗರಿಸುತ್ತಾರೆ. ತಕ್ಷಣವೇ ತಮ್ಮ ಬಳಿಯೇ ಇದ್ದ ಜಿಲ್ಲಾಧಿಕಾರಿಗಳಿಗೆ ಬರಪೀಡಿತರಿಗೆ ಸ್ವಯಂ ಸೇವೆ ಸಲ್ಲಿಸುತ್ತಿರುವ ಈ ಮಠಕ್ಕೆ ಯಾವುದೇ ರೀತಿಯ ತೊಂದರೆ ತಲೆದೋರದಂತೆ ಜಿಲ್ಲಾಡಳಿತ ಸಹಕರಿಸಬೇಕೆಂದು ಸೂಚಿಸುತ್ತಾರೆ. ಹಾಗೆಯೇ ಅಲ್ಲಿನ ಸ್ವಾಮೀಜಿಗಳ ಪಾದಕ್ಕೆ ಶರಣು ಎನ್ನುತ್ತಾರೆ. ಆ ಸ್ವಾಮೀಜಿಯೇ ಅಣ್ಣ ಬಸವಣ್ಣನ ಪುನರಾವತಾರದಂತಿರುವ ಪುಣ್ಯ ಪುರುಷ ಡಾ.ಶಿವಕುಮಾರ ಸ್ವಾಮೀಜಿ! ದಾಸೋಹದ ಸ್ವರ್ಗವಾಗಿರುವ ಆ ಮಠವೇ ಸಿದ್ಧಗಂಗೆ ಪುಣ್ಯ ಕ್ಷೇತ್ರ!

ಕಳೆದ ಏಳೆಂಟು ದಶಕಗಳಿಂದಲೂ ಅನ್ನ, ಆಶ್ರಯ, ಅಕ್ಷರ ಈ ಮೂರನ್ನೂ ದೀನದಲಿತರಿಗೆ, ಬಡಬಗ್ಗರಿಗೆ. ಅಸಹಾಯಕರಿಗೆ ಧಾರೆಯೆರೆಯುತ್ತಾ ತ್ರಿವಿಧ ದಾಸೋಹದಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ಸಿದ್ಧಗಂಗಾ ಮಠಾಧೀಶರಾದ ಡಾ. ಶಿವಕುಮಾರ ಸ್ವಾಮೀಜಿ ಇಡೀ ರಾಷ್ಟ್ರವೇ ತಮ್ಮತ್ತ ಕಣ್ಣೆತ್ತಿ

ನೋಡುವಂತೆ ಸೇವೆಯ ಹಿಮಾಲಯವಾಗಿ ಬೆಳೆದು ನಿಂತಿದ್ದಾರೆ. ತಮ್ಮ ಕೈಂಕರ್ಯದ ಬೆಳಕಿನಿಂದ ವಿಶ್ವವನ್ನೇ ಬೆರೆಗುಗೊಳಿಸಿದ್ದಾರೆ. ಇತರೆ ಸ್ವಾಮೀಜಿಗಳಂತೆ ಇವರು ಯಾವುದೋ ಒಂದು ಜನಾಂಗಕ್ಕೆ, ಜಾತಿಗೆ ಮಾತ್ರ ಸೀಮಿತವಾಗದೆ ಜಾತಿ, ಮತ, ಪಂಥ, ಧರ್ಮಗಳ ಭೇದಭಾವವಿರದೆ "ಇವನಾರವ ಇವನಾರವನೆನ್ನದೆ ಇವ ನಮ್ಮವ ಇವ ನಮ್ಮವ" ನೆನ್ನುತ ಬಸವ ಬೆಳಕಿನಲ್ಲಿ ಸಮಾಜ ಸೇವೆಗೈಯುತ್ತಿರುವ ಮಹಾಮಾನವತಾವಾದಿಯಾಗಿದ್ದಾರೆ.

ಮಹಾಜ್ಞಾನಿಗಳೂ, ಮಹಾಯೋಗಿಗಳೂ ಆಗಿರುವ ಇವರು ಕ್ರಿಸ್ತ, ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಪೈಗಂಬರ್, ಪ್ಲೇಟೋ, ಅರಿಸ್ಟಾಟಲ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾವೀರ ಮುಂತಾದ ವಿಶ್ವದ ನೂರಾರು ಚಿಂತಕರ ವಿಚಾರಧಾರೆಯನ್ನು ಅರೆದು ಕುಡಿದವರಂತೆ ಜ್ಞಾನದ ಮಹಾಪರ್ವವಾಗಿದ್ದಾರೆ. ಹಾಗೆಯೇ ತಮ್ಮ ಬಳಿಗೆ ಬಂದವರಿಗೆಲ್ಲಾ ನೆರಳು ನೀಡುವ ಮಹಾವೃಕ್ಷವಾಗಿದ್ದಾರೆ. ಶ್ರೀ ಸಿದ್ಧಗಂಗಾ ಮಠವನ್ನು ಮಾನವಕುಲದ ಮಹಾಮನೆಯನ್ನಾಗಿಸಿದ ಮಹಾಕೀರ್ತಿ ಈ ತ್ರಿವಿಧ ದಾಸೋಹ ಮೂರ್ತಿಗೆ ಸಲ್ಲುತ್ತದೆ.

ಇಂದಿಗೂ ಅನ್ನಕ್ಕಾಗಿ ಸಿದ್ಧಗಂಗೆಯಲ್ಲಿ ಇವರು ಹಚ್ಚಿದ ಒಲೆ ಉರಿಯುತ್ತಲೇ ಇದೆ. ಆಶ್ರಯಕ್ಕಾಗಿ ಇವರು ಅಡಿಗಲ್ಲಿಟ್ಟ ತಾಣ ಸೇವಾಸೌಧವಾಗಿ ಬೆಳೆಯುತ್ತಲೇ ಇದೆ. ಇವರು ಹೊತ್ತಿಸಿದ ಅಕ್ಷರ ಜ್ಯೋತಿ ಆರದ ನಂದಾದೀಪವಾಗಿ ಬೆಳಗುತ್ತಲೇ ಇದೆ. ಪ್ರತಿನಿತ್ಯ ಇಲ್ಲಿ ಸುಮಾರು ಹತ್ತು ಸಾವಿರ ಮಂದಿ ಊಟ ಮಾಡುತ್ತಾರೆಂದರೆ, ಸಹಸ್ರಾರು ಮಂದಿ ಆಶ್ರಿತರಾಗಿದ್ದಾರೆಂದರೆ, ಸಂಸ್ಥೆಗಳಲ್ಲಿ ಸುಮಾರು ಅರ್ಧಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಂದರೆ ಯಾರು ಬೇಕಾದರೂ ಊಹಿಸಬಹುದು ಶಿವಕುಮಾರ ಸ್ವಾಮೀಜಿಯ ಮಹಾಕರ್ತೃತ್ವ ಶಕ್ತಿಯನ್ನು, ಕಾಯಕದ ಮಹಾಮಹಿಮೆಯನ್ನು. ಇವರನ್ನು ನಡೆದಾಡುವ ದೇವರು, ಮಹಾಮಹಿಮರು, ಅವತಾರ ಪುರುಷರು, ಕರ್ಮಯೋಗಿಗಳು, ಇಪ್ಪತ್ತೊಂದನೆ ಶತಮಾನದ ಬಸವಣ್ಣನವರು, ಹೀಗೆ ಹಲವಾರು ಪದಪುಂಜಗಳಿಂದ, ಬಿರುದು ಬಾವಲಿಗಳಿಂದ ಕರೆದು ಆನಂದಿಸುವ ಭಕ್ತಜನ ಸಮೂಹವೇ ಇದೆ. ಇವರಲ್ಲಿ ಹೆಚ್ಚಿನವರು ಸಿದ್ಧಗಂಗೆಯ ಸ್ವಾಮೀಜಿಯ ಸದ್ಬೆಳಕಿನಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡವರೇ ಆಗಿದ್ದಾರೆ. ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರಂತಹ ಅನೇಕ ಮಂದಿ ಮಹಾಪ್ರತಿಭೆಗಳು ಇಲ್ಲಿ ಅರಳಿವೆ. ಇಲ್ಲಿನ ಸೇವೆಯ ಸಿರಿಫಸಲನ್ನು ಅನುಭವಿಸಿರುವ ಡಾ. ಜಿ. ಎಸ್. ಶಿವರುದ್ರಪ್ಪನವರು ಹೇಳುತ್ತಾರೆ.

"ಕಾವಿಯುಡುಗೆಯನ್ನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲಾ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದಿ.."

ಇಂಥ ಮಹಾಮಾನವತಾವಾದಿ ಡಾ. ಶಿವಕುಮಾರ ಸ್ವಾಮೀಜಿ ಅವತರಿಸಿದ್ದು

ಸಾವಿರದ ಒಂಬೈನೂರ ಎಂಟರ ಏಪ್ರಿಲ್ ಒಂದರಂದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಲೂರು ಹೋಬಳಿಯ ವೀರಾಪುರ ಇವರಿಗೆ ಜನ್ಮ ನೀಡಿದ ಪುಣ್ಯ ಸ್ಥಳ. ಸುಸಂಸ್ಕೃತ ಮನೆತನದ ಹೊನ್ನೇಗೌಡ ಮತ್ತು ಗಂಗಮ್ಮ ದಂಪತಿಗಳೇ ಇವರನ್ನು ಹೆತ್ತ ಪುಣ್ಯವಂತರು. ಹದಿಮೂರು ಮಂದಿ ಮಕ್ಕಳಲ್ಲಿ ಇವರೇ ಕಿರಿಯವರು. ಶಿವಣ್ಣ ಎಂಬುದು ಇವರ ಪೂರ್ವಾಶ್ರಮದ ಹೆಸರು. ಇವರು ತುಮಕೂರಿನಲ್ಲಿ ಹೈಸ್ಕೂಲ್ ವ್ಯಾಸಾಂಗ ಮಾಡುತ್ತಿದ್ದಾಗ ತಮಕೂರಿನಲ್ಲಿ ಭಯಂಕರ ಪ್ಲೇಗ್‌ರೋಗ ಬಂದು ಜನರು ಜೀವಭಯದಿಂದ ತತ್ತರಿಸುವಂತೆ ಮಾಡಿತ್ತು. ಇಂತಹ ಸಂದರ್ಭದಲ್ಲಿ ಓದುವುದಾದರೂ ಹೇಗೆಂಬ ಆತಂಕ ಇವರನ್ನು ಕಾಡತೊಡಗಿತು. ಆದರೆ ಓದಿನಲ್ಲಿ ವಿಪರೀತ ಆಸಕ್ತಿ ಇದ್ದ ಇವರು ಹೇಗಾದರೂ ಮಾಡಿ ಓದನ್ನು ಮುಂದುವರಿಸುವ ಮಹದಾಸೆ ಇಟ್ಟುಕೊಂಡು ಇದಕ್ಕಾಗಿ ಮಾರ್ಗ ಹುಡುಕತೊಡಗಿದರು. ಆಗ ಕಾರ್ಗತ್ತಲಲ್ಲಿ ಇಣುಕುವ ಬೆಳಕಿನ ಹನಿಯಂತೆ ಗೋಚರಿಸಿದ್ದೇ ಶ್ರೀ ಸಿದ್ಧಗಂಗ ಮಠ. ಆ ಸಂದರ್ಭದಲ್ಲಿ ಅಲ್ಲಿಗೆ ಪ್ರವೇಶ ಮಾಡಿದ ಇವರು ಆಗ ಅಲ್ಲಿ ಮಠಾಧೀಶರಾಗಿದ್ದ ಶ್ರೀ ಉದ್ಧಾನ ಶಿವಯೋಗಿಗಳಲ್ಲಿ ಆಶ್ರಯ ಬೇಡಿದರು. ಅಪಾರ ವಿದ್ಯಾದಾಹದಿಂದ ಬಂದಿದ್ದ ಇವರು ಆಶ್ಚರ್ಯಕರ ರೀತಿಯಲ್ಲಿ ಪ್ರಥಮ ಭೇಟಿಯಲ್ಲೇ ಉದ್ಧಾನ ಶಿವಯೋಗಿಗಳ ಮನಸ್ಸನ್ನು ಆಕರ್ಷಿಸಿಬಿಟ್ಟರು.

ಸಿದ್ಧಗಂಗಾ ಮಠದಲ್ಲಿಟ್ಟುಕೊಂಡೇ ಹೈಸ್ಕೂಲ್ ವ್ಯಾಸಂಗ ಮುಗಿಸಿದ ಶಿವಕುಮಾರ ಸ್ವಾಮೀಜಿ ಅವರು ಆಗಲೇ ಆಧ್ಯಾತ್ಮ ಹಾಗೂ ಸಮಾಜಸೇವೆಯ ಬಗ್ಗೆ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದರು. ಇವರಲ್ಲಿನ ಈ ಆದರ್ಶಗುಣ ಉದ್ಧಾನಶಿವಯೋಗಿಗಳಲ್ಲಿ ಇವರ ಬಗ್ಗೆ ಮತ್ತಷ್ಟು ಹೆಚ್ಚಿನ ಪ್ರೀತಿ ಮೂಡಲು ಕಾರಣವಾಗಿತ್ತು. ಈ ಅಭಿಮಾನದ ಪ್ರೀತಿಯಿಂದಲೇ ಶಿವಕುಮಾರ ಸ್ವಾಮೀಜಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ ಪಡೆಯುತ್ತಿದ್ದಂತೆಯೇ ೧೯೩೦ ರ ಮಾರ್ಚ್ ೩ ರಂದು ಉದ್ಧಾನ ಶ್ರೀಗಳು ಇವರನ್ನು ಸಿದ್ಧಗಂಗಾ "ಕಾಯಕವೇ ಕೈಲಾಸ" ಎಂಬುದಕ್ಕೆ ಅನ್ವರ್ಥವಾಗಿ ಸಂತನಂತೆ ಬದುಕುತ್ತಾ ತಮ್ಮ ನಿರಾಡಂಬರ, ನಿಸ್ವಾಥ, ನಿರ್ಮಲ, ನಿರ್ವಂಚನೆಯ ಪ್ರಾಮಾಣಿಕತೆಯೊಂದಿಗೆ ಭಕ್ತಿ,

ಜ್ಞಾನ, ಕರ್ಮಯೋಗಗಳ ಸತ್ಪಥದಲ್ಲಿ ಊಹೆಗೂ ನಿಲುಕದ ರೀತಿಯಲ್ಲಿ ಸಾಧನೆಗಳ ಸರಮಾಲೆಯನ್ನೇ ಇವರು ಧರಿಸಿದ್ದಾರೆ. ಸಿದ್ಧಗಂಗೆಯ ಈ ಸಿದ್ಧಿ ಪುರುಷ ಶತಾಯುಷಿಯಾದ ಶುಭಸಂದರ್ಭದಲ್ಲಿ ನಾಡಿನ ಸಮಸ್ತ ಜನತೆಯ ಪರವಾಗಿ ಉಘೇ ಉಘೇ ಅನ್ನುವ ರೀತಿಯಲ್ಲಿ ಕರ್ನಾಟಕ ಸರ್ಕಾರ ಇವರಿಗೆ "ಕರ್ನಾಟಕ ರತ್ನ" ಬಿರುದಿನ ಪ್ರಶಸ್ತಿ ನೀಡಿ ೨೦೦೭ ರ ಏಪ್ರಿಲ್ ಒಂದರಂದು ಸನ್ಮಾನಿಸಿದೆ. ಆ ಘನ ಸಂದರ್ಭದಲ್ಲೂ ಇವರ ಹೃನ್ಮನಕಂಗಳಲ್ಲಿ ಮಿಂಚಿದ್ದು "ಸೇವಾರತ್ನ"ವೇ! ಹಾಗೆಯೇ ಭಾರತ ಸರ್ಕಾರದ "ಪದ್ಮಭೂಷಣ ಪ್ರಶಸ್ತಿ" ಇವರ ಮುಡಿಗೇರಿದಾಗಲೂ ಈ

ಮಾತನಾಡುವ ದೇವರ ಮುಖದಲ್ಲಿ ಹೊಳೆದದ್ದು ನಿಸ್ವಾರ್ಥದ ಹೊಂಬೆಳಕೇ! ಅಂತೆಯೇ ಇಡೀ ಕರ್ನಾಟಕ ಸರ್ಕಾರವೇ ತುಮಕೂರಿನ ಸಿದ್ಧಗಂಗಾ ಮಠಕ್ಕೆ ತೆರಳಿ ಈ ಅಭಿನವ ಬಸವಣ್ಣನಿಗೆ ಅವರ ೧೦೩ ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ೨೦೧೦ಏಪ್ರಲ್ ೧ ರಂದು 'ರಾಷ್ಟ್ರೀಯ ಬಸವ ಪುಸ್ಕಾರ ಪ್ರಶಸ್ತಿ' ನೀಡಿ ಗೌರವಿಸಿದಾಗಲೂ ಇವರ ಇಡೀ ಶರೀರದ ತುಂಬಾ ಪ್ರಜ್ವಲಿಸಿದ್ದು ತ್ರಿವಿಧ ದಾಸೋಹದ ದಿವ್ಯ ಬೆಳಕೇ! ಇವೆಲ್ಲಕ್ಕೂ ಕಳಶವಿಟ್ಟಂತೆ ಕೇಂದ್ರ ಸರ್ಕಾರದ ೨೦೧೫ನೇ ಸಾಲಿನ ಪದ್ಮಭೂಷಣ ಪ್ರಶಸ್ತಿಗೆ ಇವರು ಭಾಜನರಾಗಿದ್ದಾರೆ.

ಮಠದ ಕಿರಿಯ ಶ್ರೀಗಳನ್ನಾಗಿ ನೇಮಿಸಿದರು. ನಂತರದ ದಿನಗಳಲ್ಲಿ ಉದ್ದಾನ ಶಿವಯೋಗಿಗಳು ಕಾಲವಾದ ನಂತರ ೧೯೪೧ ರಲ್ಲಿ ಶಿವಕುಮಾರ ಸ್ವಾಮೀಜಿ ಸಿದ್ಧಗಂಗಾ ಮಠದ ಪೀಠವನ್ನೇರಿದರು. ಅಲ್ಲಿಂದೀಚೆಗೆ ಬಹುಮುಖ್ಯವಾದ ಜವಾಬ್ದಾರಿಯನ್ನು ತಲೆಮೇಲೆ ಹೊತ್ತುಕೊಂಡು ಶ್ರೀ ಮಠದ ಅಭಿವೃದ್ಧಿಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಊರೂರು ಅಲೆದು ನಿಜದ ಅರ್ಥದಿ ಜಂಗಮರೇ ಆಗಿ ಸಾತ್ವಿಕ ಮನಸ್ಸಿನಿಂದ ಬೊಗಸೆಯೊಡ್ಡಿ ಬೇಡಿ ಮಠವನ್ನು ಭುವಿಯಿಂದ ಗಗನದೆತ್ತರ ಬೆಳೆಸಿದರು. ತನ್ಮೂಲಕ ಸಮಾಜ ಸೇವೆಯನ್ನು ತಮ್ಮ ಬದುಕಿನ ಧ್ಯೇಯವಾಕ್ಯ ಮಾಡಿಕೊಂಡು ನಾಡು ಕೊಂಡಾಡುವಂತೆ ತ್ರಿವಿಧಿ ದಾಸೋಹದ ಹೊಸ ಇತಿಹಾಸವನ್ನೇ ಸೃಷ್ಟಿಸಿದರು.

ಈಗ ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿಯವರು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ನೂರ ಇಪ್ಪತ್ತೈದಕ್ಕೂ ಹೆಚ್ಚು ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರಲ್ಲಿ ಶೇಕಡ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನಾಥರು. ಆದರೆ ಅನಾಥರೆಂಬ ಭಾವ ಬಾರದಂತೆ ಅವರಿಗೆ ತಾವೇ ತಾಯಿಯೂ ಆಗಿ, ತಂದೆಯೂ ಆಗಿ, ಕರುಣಾಸಿಂಧುವಾಗಿ ಅವರೆಲ್ಲರನ್ನು ಸ್ವಂತ ಮಕ್ಕಳಂತೆ ಸಲಹುತ್ತಿದ್ದಾರೆ. ಇವರ ಬಳಿಗೆ ಬರುವ ಯಾರಿಗೂ ಜಾತಿ–ಮತಗಳ ತಾರತಮ್ಯವಿಲ್ಲ. ಎಲ್ಲಾ ಭಾಷಿಕರ, ಎಲ್ಲಾ ಧರ್ಮೀಯರ, ಎಲ್ಲಾ ಜಾತಿಗಳ ಜನ ಇವರ ನೆರಳಿನಲ್ಲಿದ್ದಾರೆ. ಇವರೊಂದು ಸರ್ವಧರ್ಮಗಳ ಮಹಾಸಂಗಮವೆನ್ನಬಹುದು. ಬುದ್ಧನ ಕರುಣೆ, ವಿವೇಕರ ಕೆಚ್ಚು, ಗಾಂಧಿಯ ಸಾಮಾಜಿಕ ಕಳಕಳಿ, ಅಂಬೇಡ್ಕರರ ಇಚ್ಛಾಶಕ್ತಿ, ಮದರ್ ತೆರೆಸಾರ ತಾಯ್ತನ.. ಹೀಗೆ ಎಲ್ಲಾ ಮಹನೀಯರ ತತ್ವಾದರ್ಶಗಳ ಸಾತ್ವಿಕ ಸತ್ಪುರುಷರಿವರು.

ಸಾಭಾರ–ಜನಪದ

ಅಂಬೇಡ್ಕರಕೈಗೆ ಮರಳಿ ಬಂದ ಸಂವಿಧಾನ

–ಬರಗೂರು ರಾಮಚಂದ್ರಪ್ಪ

ಮತ್ತೊಂದು ಅಂಬೇಡ್ಕರ್ ಜಯಂತಿ ಬಂದಿದೆ. ಒಂದೂ ಕಾಲು ಶತಮಾನದ ಹಿಂದೆ ಹುಟ್ಟಿದ (೧೪-೪-೧೮೯೧) ಅಂಬೇಡ್ಕರ್ ರಾಷ್ಟ್ರಾದ್ಯಂತ ಜಯಂತಿ ಆಚರಿಸುವ ಹಂತಕ್ಕೆ ಸುಖಾಸುಮ್ಮನೆ ಬೆಳೆಯಲಿಲ್ಲ. ಅಸ್ಪೃಶ್ಯರೆಂದು ಕರೆಸಿಕೊಳ್ಳುತ್ತಿದ್ದ ಜನಾಂಗದಲ್ಲಿ ಹುಟ್ಟಿ ದೇಶದ ಸಂವಿಧಾನವನ್ನು ಸೃಷ್ಟಿಸಿದ ಶಿಲ್ಪಿಯಾದದ್ದು ಸಾಮಾನ್ಯ ಬೆಳವಣಿಗೆಯಲ್ಲ. ಬದುಕಿನ ಪೂರ್ವಾರ್ಧದಲ್ಲಿ ಅಂಬೇಡ್ಕರ್ ಅನುಭವಿಸಿದ ಅವಮಾನಗಳು ನಮ್ಮ ಸಾಮಾಜಿಕ ಸಂರಚನೆಯ ಹಿಂಸಾರೂಪಕಗಳೆಂದರೆ ತಪ್ಪಾಗುವುದಿಲ್ಲ. ಸುಬೇದಾರ್ ರಾಮ್‌ಜಿ ಮತ್ತು ಭೀಮಾಬಾಯಿಯವರ ಮಗನಾಗಿ ಜನ್ಮ ತಳೆದ ಇವರು ೭-೧೧-೧೯೦೦ ರಲ್ಲಿ ಮಾಧ್ಯಮಿಕ ಶಾಲೆ ವಿದ್ಯಾರ್ಥಿಯಾಗುವಷ್ಟರಲ್ಲೇ ಅವಮಾನಗಳನ್ನು ಅನುಭವಿಸಿದರು. ಇವರನ್ನು ಇತರೆ ವಿದ್ಯಾರ್ಥಿಗಳ ಜತೆ ಕೂಡಿಸುತ್ತಿರಲಿಲ್ಲ. ಯಾರೂ ಮುಟ್ಟುತ್ತಿರಲಿಲ್ಲ. ಆದರೆ ಬ್ರಾಹ್ಮಣರಾಗಿದ್ದ ಅಂಬೇಡ್ಕರ್

ಅಂಬೇವಾಡೇಕರ್ ಎಂಬ ಶಿಕ್ಷಕರು ಈ ಭೀಮನಿಗೆ (ಅಂಬೇಡ್ಕರ್‌ಗೆ) ಪ್ರೋತ್ಸಾಹ ಕೊಟ್ಟರು. ಮೇಲ್‌ಜಾತಿಯಲ್ಲಿ ಹುಟ್ಟಿದವರೂ ತಮ್ಮ ಹುಸಿ ಮೇಲರಿಮೆಯನ್ನು ತ್ಯಜಿಸಿ ಜಡ ಸಂಪ್ರದಾಯಗಳನ್ನು ಸರಿಸಿ, ಮಾನವೀಯ ಮೌಲ್ಯಕ್ಕೆ ಮನ್ನಣೆ ನೀಡುತ್ತ ಬಂದಿರುವ ಕೆಲ ಸಾಕ್ಷಿಗಳಲ್ಲಿ ಅಂಬೇವಾಡೇಕರ್, ಮಂಗಳೂರಿನ ಕುದ್ಮುಲ್ ರಂಗರಾವ್ ಮುಂತಾದವರು ಸೇರುತ್ತಾರೆ. ಇಂತಹ ಕೆಲವರು ಮಾನವೀಯತೆಯ ನಮ್ಮ ಮಣ್ಣಿನ ಗುಣವೆಂದು ತೋರಿಸುತ್ತಿದ್ದರೆ ಇನ್ನು ಕೆಲವರು ಮಾನವೀಯ ಗುಣವನ್ನೇ ಮಣ್ಣು ಮುಕ್ಕಿಸುತ್ತಾರೆ. ಈ ಮಾದರಿಯ "ಮಣ್ಣು ಮಕ್ಕಳು"ಗಳ ಮಧ್ಯೆ ಡಾ. ಅಂಬೇಡ್ಕರ್ ಎಂಬ ಬದಲಾವಣೆಯ ಬೆಳಕೊಂದು ಭಾರತದಲ್ಲಿ ಬೆಳೆದು ಗೌರವಾರ್ಹವಾದದ್ದು ಒಂದು ಇತಿಹಾಸವೇ ಸರಿ. ಆಗ ನಮ್ಮ ಸಮಾಜದ ಮನಸ್ಸು ಎಷ್ಟು ಮಲಿನಗೊಂಡಿತ್ತೆಂದರೆ ಅಂಬೇಡ್ಕರ್ ಅವರ ಮದುವೆಗೆ ಜಾಗವೇ ಸಿಗಲಿಲ್ಲ. ಕಡೆಗೆ 'ಬೈಕಳ' ಎಂಬ ಮೀನು ಮಾರುಕಟ್ಟೆಯಲ್ಲಿ ಮದುವೆಯಾದರು. ಮದುವೆಯ

ನಂತರ ಮಡಿವಂತರು ಮೀನುಮಾರುಕಟ್ಟೆಯಲ್ಲಿ ತೊಳೆದು 'ಶುದ್ಧಿ' ಮಾಡಿ ತಮ್ಮ 'ಅಶುದ್ಧಿ'ಯನ್ನು ಅನಾವರಣಗೊಳಿಸಿದರು. ೧೯೧೬ರಲ್ಲಿ ಅಂಬೇಡ್ಕರ್ 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್'ನಲ್ಲಿ ಪ್ರವೇಶ ಪಡೆದರು. ಅಲ್ಲಿಂದ ಬಂದ ಮೇಲೆ ೧೯೧೭ರಲ್ಲಿ ಸಯ್ಯಾಜಿ ಮಹಾರಾಜ್ ಅವರು ಅಂಬೇಡ್ಕರ್ ಅವರನ್ನು ಅರ್ಥ ಸಚಿವರನ್ನಾಗಿ ನೇಮಿಸಲು ಮುಂದಾದರು. ಜಾತಿವಾದಿ ಅಧಿಕಾರಿಗಳ ವಿರೋಧದಿಂದ ಈ ಪ್ರಸ್ತಾಪವನ್ನು ಕೈಬಿಟ್ಟು ಸೇನಾ ಕಾರ್ಯದರ್ಶಿಯಾಗಿ ನೇಮಿಸಿದರು, ಈ ನೇಮಕವನ್ನೂ ಸಹಿಸದ ಜಾತಿವಾದಿ ಅಧಿಕಾರಿಗಳು, ಅಂಬೇಡ್ಕರ್ ಅವರು ಕಛೇರಿಗೆ ಬರುವಾಗ ಕಾರ್ಪೆಟ್ಟನ್ನು ಪಕ್ಕಕ್ಕಿಟ್ಟು ಆ ನಂತರ ಹಾಸುವಂತೆ ಮಾಡುತ್ತಿದ್ದರು.

ಇದಿಷ್ಟು ಅಂಬೇಡ್ಕರ್ ಬದುಕಿನ ಅತ್ಯಂತ ಸಂಕ್ಷಿಪ್ತ ಸಾಂಕೇತಿಕ ರೂಪ. ಆದರೆ ಈ ಎಲ್ಲ ಅವಮಾನಗಳನ್ನು ದಾಟಿ ದಿಟ್ಟವಾಗಿ ಬೆಳೆದು ಸಂವಿಧಾನದ ಕರಡು ಕಟ್ಟಿಕೊಟ್ಟದ್ದು ನಮ್ಮ ದೇಶದ ಒಂದು ಚಾರಿತ್ರಿಕ ಸಂಭವ. ಈ ಸಂವಿಧಾನದ ಆಧಾರದ ಮೇಲೆ ನಾವು ನಮ್ಮ ದೇಶವನ್ನು ಕಟ್ಟಿ ಚರಿತ್ರೆಯ ನಿರ್ಮಾಣ ಮಾಡಿದ್ದೇವೆಯೆ? ಈ ಪ್ರಶ್ನೆಗೆ ಸಂಪೂರ್ಣವಾಗಿ ಹೌದು ಅಥವಾ ಇಲ್ಲ ಎಂದು ಉತ್ತರಿಸುವಂತಿಲ್ಲ. ಅದು ಸಾಧುವೂ ಅಲ್ಲ. ಸತ್ಯವೂ ಅಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ದೇಶವು ಸಂವಿಧಾನವನ್ನು ತಾಂತ್ರಿಕವಾಗಿ ಪೂರ್ಣ ಅನುಸರಿಸಿದೆ; ತಾತ್ವಿಕವಾಗಿ ಆಂಶಿಕ ಅನುಸರಣೆ ಮಾತ್ರವಾಗಿದೆ. ಸರಳವಾಗಿ ವಿವರಿಸುವುದಾದರೆ ಚುನಾವಣೆಯನ್ನು ತಾಂತ್ರಿಕ ನಿಯಮಗಳನುಸಾರ ನಡೆಸಲಾಗುತ್ತಿದೆ. ರಾಜಕೀಯ ಪಕ್ಷಗಳಲ್ಲಿ ಚುನಾವಣೆಯ ಅಂತಃಸತ್ವವಾಗಬೇಕಾಗಿದ್ದ ತಾತ್ವಿಕತೆ ಮತ್ತು ನೈತಿಕತೆ ಇಲ್ಲವಾಗಿದೆ. ಇದರಿಂದ ಸಂವಿಧಾನದ ತಾತ್ವಿಕ ದರ್ಶನವನ್ನು ದಿಕ್ಕು ತಪ್ಪಿಸಲಾಗಿದೆ.

ಹಾಗಾದರೆ, ಅಂಬೇಡ್ಕರ್ ಅರಿವಿನ ಸಂವಿಧಾನದ ಪ್ರಮುಖ ತಾತ್ವಿಕ ದರ್ಶನಾಂಶಗಳು ಯಾವುದು? ಇಲ್ಲಿ ನೆಹರೂ ಅವರ ಮಾತು ನೆನಪಿಗೆ ಬರುತ್ತಿದೆ, ಅವರು ಹೀಗೆ ನುಡಿದರು, "ಭಾರತದ ಸಂವಿಧಾನ ರಚನೆಗೆ ಅಂಬೇಡ್ಕರ್ ಅವರಂತೆ ತೊಡಗಿಸಿಕೊಂಡ ಬೇರೆ ಯಾರೊಬ್ಬರೂ ಇಲ್ಲ. ಅದ್ಭುತ ವಿದ್ವಾಂಸರೂ ವಿಚಾರವಂತರೂ ವೈಜ್ಞಾನಿಕ ಮನೋಧರ್ಮದವರೂ ಆದ ಡಾ. ಅಂಬೇಡ್ಕರ್ ಅವರು ಜಾತ್ಯತೀತ ಅಖಂಡ ನವಭಾರತ ನಿರ್ಮಾಣಕ್ಕೆ ಈ ಸಂವಿಧಾನದಲ್ಲಿ ಭದ್ರಬುನಾದಿ ಹಾಕಿದ್ದಾರೆ". ಡಾ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಹಾಕಿಕೊಟ್ಟ 'ಜಾತ್ಯತೀತ ಅಖಂಡ ನವ ಭಾರತ'ದ ತಾತ್ವಿಕ ತಳಹದಿಗನುಗುಣವಾಗಿ ನೆಹರೂ ನಡೆದುಕೊಂಡು, ಜಾತಿ, ಮತ

ಧರ್ಮಗಳ ವಿಭಜನೆಗೆ ವಿರುದ್ಧವಾಗಿ ಆಡಳಿತವನ್ನು ಕಟ್ಟತೊಡಗಿದರು. ಹಾಗೆ ನೋಡಿದರೆ ಸಂವಿಧಾನದಲ್ಲಿ ಮೊದಲಿಗೆ 'ಜಾತ್ಯಾತೀತ' ಎಂಬ ಪದವನ್ನು ಸೇರಿಸಿರಲಿಲ್ಲ. ಆದರೆ ಸಂವಿಧಾನದ ತಾತ್ವಿಕ ಆಶಯ ಮತ್ತು ಅಂಶಗಳಲ್ಲೇ ಜಾತ್ಯತೀತ ತತ್ವ ಅಂತರ್ಗತವಾಗಿತ್ತು. ಸಮಾಜವಾದಿ ಅಂಶಗಳೂ ಅಂತಃಸತ್ವವಾಗಿದ್ದವು. ಆದರೂ ಇಂದಿರಾಗಾಂಧಿಯವರ ಆಡಳಿತಾವಧಿಯಲ್ಲಿ ತಿದ್ದುಪಡಿ ತಂದು ಪ್ರಸ್ತಾವನೆಯಲ್ಲಿ ಸಮಾಜವಾದಿ ಮತ್ತು ಜಾತ್ಯಾತೀತ ಎಂಬ ಪದಗಳನ್ನು ಸೇರಿಸಲಾಯಿತು. ಆದರೆ ಈಗ ಏನಾಗಿದೆ? ಸಮಾಜವಾದದ ಆರ್ಥಿಕ ನೀತಿ ತೀವ್ರನಿಗಾ ಘಟಕದಲ್ಲಿದೆ. ಸಮಾಜವಾದಿ ಎನ್ನಬಹುದಾದ ಕೆಲವು ಅಂಶಗಳು ಇನ್ನೂ ಇವೆಯೆಂದು ತೋರಿಸಲು ಬಜೆಟ್‌ನಲ್ಲಿ ಬಡವರಿಗೆ ಸಹಾಯ ಮಾಡುವ ಅಂಶಗಳ ಆಮ್ಲಜನಕವನ್ನು ನೀಡಲಾಗುತ್ತಿದೆ. ಸಮಾಜವಾದಿ ದೃಷ್ಟಿ ಮತ್ತು ಜಾತ್ಯಾತೀತತೆಗೆ ಸಂಬಂಧವಿದೆಯಾದ್ದರಿಂದ ಅದಕ್ಕೂ ಅದೇ ಗತಿ ಕಾಣಿಸುವ ಪ್ರಯತ್ನಗಳು ನಡೆಯುತ್ತಿವೆ. ಜಾತಿಯ ಕಾರಣದಿಂದಲೇ ದಮನಿತರಾದವರ ಪರವಾಗಿ ನಿಲ್ಲುವುದು ಜಾತಿವಾದವಲ್ಲ; ಅದು ಜಾತ್ಯಾತೀತ ತತ್ವದ ಒಂದು ಅಂಶ. ಈ ಅಂಶವನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದ ಅನೇಕರು ನಮ್ಮಲ್ಲಿದ್ದು ಪರ-ವಿರೋಧದ ಹುಸಿ ವಾದಗಳು ವಿಜೃಂಭಿಸುತ್ತಿವೆ.

'ಸಂವಿಧಾನದಕ್ಕೆ ಜಾತ್ಯಾತೀತ, ಎಂಬ ಪದವನ್ನು ಸೇರಿಸಿದ್ದು ದುರದೃಷ್ಟಕರ ಎಂದು ಬಿಜೆಪಿ ವಕ್ತಾರ ಶ್ರೀ ಸಂಬಿತ್ ಪಾತ್ರ ಅವರು ೬-೪-೨೦೧೭ ರಂದು ಹೇಳಿದ್ದು ನಿಜಕ್ಕೂ ದುರದೃಷ್ಟಕರ. ಜಾತ್ಯಾತೀತೆಯ ಚರ್ಚೆ ಈ ಮಟ್ಟಕ್ಕೆ ಇಳಿದಿದೆ.

ಸಂವಿಧಾನದಲ್ಲಿ ಅಂಬೇಡ್ಕರ್ ಅವರು ಜಾತ್ಯಾತೀತ ಎಂಬ ಪದವನ್ನು ಬಳಸದೇ ಇದ್ದರೂ ಆಶಯ ಅದೇ ಆಗಿತ್ತು. ಸಂವಿಧಾನದೊಳಗೆ ಆವರಿಸಿಕೊಂಡಿತ್ತು. ಅವರು ತಮ್ಮ ಲೇಖನವೊಂದರಲ್ಲಿ The castes are antinational' ಎಂದು ಬರೆದರು. ಸಂವಿಧಾನವು ಅಧಿಕೃತವಾಗಿ ಅಂಗೀಕಾರವಾಗುವ ಮುನ್ನಾದಿನ (೨೫-೧-೧೯೪೯) ಸಂವಿಧಾನ ಸಭೆಯಲ್ಲಿ ಡಾ. ಅಂಬೇಡ್ಕರ್ ಮಾಡಿದ ಭಾಷಣದಲ್ಲಿ ಆರ್ಥಿಕ ಪ್ರಜಾಪ್ರಭುತ್ವ, ರಾಜಕೀಯ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ ಎಂಬ ಮೂರು ರೂಪಗಳನ್ನು ಪ್ರತಿಪಾದಿಸುತ್ತಾರೆ. "ಆರ್ಥಿಕ ಪ್ರಜಾಪ್ರಭುತ್ವವು ಒಂದು ಜೀವನಪದ್ಧತಿ," ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳನ್ನು ಒಳಗೊಂಡ ಪದ್ಧತಿ,' ಎಂದು ನಿರೂಪಿಸಿದರು. "ಈ ಮೂರೂ ಅಂಶಗಳನ್ನು ಪ್ರತ್ಯೇಕಿಸುವಂತಿಲ್ಲ; ಪ್ರತ್ಯೇಕಿಸಿದರೆ ಪ್ರಜಾಪ್ರಭುತ್ವದ ಉದ್ದೇಶವೇ ವಿಫಲವಾಗುತ್ತದೆ." ಎಂದು ಎಚ್ಚರಿಸಿದರು.

ಅಂಬೇಡ್ಕರ್ ಅವರ 'ಸಾಮಾಜಿಕ ಪ್ರಜಾಪ್ರಭುತ್ವ'ದ ಪರಿಕಲ್ಪನೆಯಲ್ಲೇ ಜಾತ್ಯಾತೀತ ತತ್ವ ಅಂತರ್ಗತವಾಗಿದೆ. ಸರ್ವಧರ್ಮ ಸಮಭಾವ ಸಾವಯುವಗೊಂಡಿದೆ. ಆದರೆ, ಡಾ. ಅಂಬೇಡ್ಕರ್ ಅವರ ಸಾಮಾಜಿಕ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ನಮ್ಮ ದೇಶ ನಿಜಕ್ಕೂ ಕ್ರಿಯಾತ್ಮಕಗೊಳಿಸಿದೆಯೇ? ಜಾತಿವಾದಕ್ಕೆ ಹಿನ್ನಡೆ ಆಗಿದೆಯೆ? 'ಹೌದು' ಎಂದು ಹೇಳಲಿಕ್ಕೆ ಸಾಧ್ಯವಿಲ್ಲದ ಸಂದರ್ಭದಲ್ಲಿ ನಾವು ಬದುಕುತ್ತಿದ್ದೇವೆ. ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಅಂದು ವ್ಯಕ್ತಪಡಿಸಿದ 'ತಲ್ಲಣ' ಈಗ ಸಂವಿಧಾನ ನಿಷ್ಠರಾದ ಸಮಾನತಾವಾದಿಗಳನ್ನು ಕಾಡಿಸುತ್ತಿದೆ. ಅವರು ಅಂದು ಎಷ್ಟು ಕಳಕಳಿಯಿಂದ ಹೇಳಿದ್ದರು ಗೊತ್ತೆ? "ತಲ್ಲಣವು ನನ್ನನ್ನು ಕಾಡುತ್ತಿದೆ. ಸಂವಿಧಾನವು ತನ್ನ ಪ್ರಜಾಸತ್ತಾತ್ಮಕ ಲಕ್ಷಣಗಳನ್ನು ಉಳಿಸಿಕೊಳ್ಳಲಿದೆಯೆ?" ಎಂದು ತಳಮಳಿಸಿದ್ದರು. ಈ ತಳಮಳ ಇಂದು ಎಲ್ಲ 'ಸಾಮಾಜಿಕ ಪ್ರಜಾಪ್ರಭುತ್ವವಾದಿ'ಗಳದಾಗುತ್ತಿದೆ. ಸರ್ವಧರ್ಮ ಸಮಭಾವ ಬೆವರೊಡೆದು ನಿಂತಿದೆ.

ದೇಶನಾಯಕರ ಆದರ್ಶದ ಮಾತುಗಳು ಇಂದಿಗೂ ಮಾದರಿಯಾಗಿವೆಯೆಂಬುದು ನಿಜ. ಆದರೆ ಅನುಷ್ಠಾನ? ಅದೇ ಅನುಮಾನ. ಗಾಂಧೀಜಿ ಅಂದು ಹೀಗೆಂದರು: "ನನ್ನ ಕನಸಿನ ಭಾರತ ಒಂದು ಧರ್ಮವನ್ನು ಮಾತ್ರ ಒಳಗೊಂಡಿರಬೇಕು ಎಂದು ನಾನು ಭಾವಿಸುವುದಿಲ್ಲ. ಅದು ಪೂರ್ತಿ ಹಿಂದೂ, ಪೂರ್ತಿ ಮುಸ್ಲಿಂ ಅಥವಾ ಪೂರ್ತಿ ಕ್ರೈಸ್ತ ರಾಷ್ಟ್ರವಾಗಬಾರದು. ದೇಶ ಸಂಪೂರ್ಣವಾಗಿ ಸಹಿಷ್ಣುವಾಗಿರಬೇಕು". ಆದರೇನು ಮಾಡುವುದು? 'ಹಿಂದೂ ರಾಷ್ಟ್ರದ ಕಲ್ಪನೆಗೆ ಮತ್ತೆ ಮತ್ತೆ ಚಾಲನೆ ಕೊಡುವವರಿದ್ದಾರೆ. ೭-೪-೨೦೧೭ ರಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು 'ಹಿಂದೂರಾಷ್ಟ್ರವಾದರೆ ತಪ್ಪೇನು' ಎಂದು ಕೇಳಿದರು. ಇನ್ನು ಸಹಿಷ್ಣುತೆ ವಿಷಯಕ್ಕೆ ಬಂದರೆ, ಬಾಬರಿ ದಾಳಿಯ ನಂತರ ಮುಸ್ಲಿಂ ಮೂಲದ ಭಯೋತ್ಪಾದನೆ ಹೆಚ್ಚಾಗುತ್ತಿದೆ; ಇತ್ತೀಚೆಗೆ ಹಿಂದೂ ಮೂಲಭೂತವಾದಿಗಳ ಅಸಹನೆ ಅತಿಯಾಗುತ್ತಿದೆ. ಇಬ್ಬರೂ ಸೇರಿ ಸಹಿಷ್ಣುತೆಯ ಆದರ್ಶಕ್ಕೆ ಧಕ್ಕೆ ತರುತ್ತಿದ್ದಾರೆ. ಹಾಗೆಂದು ಎಲ್ಲ ಮುಸ್ಲಿಮರನ್ನೂ ಎಲ್ಲ ಹಿಂದೂಗಳನ್ನು ದೂಷಿಸುವಂತಿಲ್ಲ. ಬಿಜೆಪಿಯ ನೇತಾರರೂ ಸರ್ವಧರ್ಮ ಸಮಭಾವ ಪ್ರತಿಪಾದಿಸಿದ ಉದಾಹರಣೆಗಳಿವೆ. ಹಿಂದೂ ರಾಷ್ಟ್ರದ ಕಲ್ಪನೆಗೆ ಕುಮ್ಮಕ್ಕು ಕೊಡದ ವಾಜಪೇಯಿಯವರು 'ಹಿಂದುತ್ವಕ್ಕಿಂತ ನನಗೆ ಭಾರತೀಯತೆಯೇ ಮುಖ್ಯ' ಎಂದು ಹೇಳಿದ್ದರು. ಹಿಂದುತ್ವವೇ ಭಾರತೀಯತ್ವ ಎನ್ನಲಿಲ್ಲ. ಅದ್ವಾನಿಯರು ಸಹ 'ಭಾರತೀಯತೆ' ಮುಖ್ಯವೆಂದು ಹೇಳಿದ್ದುಂಟು. ಅಷ್ಟೇಕೆ ಸ್ವತಃ ಪ್ರಧಾನಿ

ನರೇಂದ್ರ ಮೋದಿಯವರೇ ೨೦೧೫ರಲ್ಲಿ ಲೋಕಸಭೆಯಲ್ಲಿ ನಡೆದ ಎರಡು ದಿನಗಳ ಸಂವಿಧಾನ ಕುರಿತ ಚಿಂತನೆಯ ಕೊನೆಯಲ್ಲಿ "ಪ್ರಜಾಪ್ರಭುತ್ವವೇ ನಮ್ಮ ದೇಶದ ಧರ್ಮ; ಸಂವಿಧಾನವೇ ನಮ್ಮ ದೇಶದ ಪವಿತ್ರ ಗ್ರಂಥ' ಎಂದು ಸಂಕಲ್ಪ ಶೈಲಿಯಲ್ಲಿ ಸಾರಿದರು. ಮೋದಿಯವರ ಮಾತಿಗೆ ಜೀವಕೊಟ್ಟು ನೆಲೆಗೊಳಿಸಿದರೆ ಸಹಿಷ್ಣುತೆ ಒಂದು ಸಮಸ್ಯೆಯಾಗುವುದೇ ಇಲ್ಲ. ಆದರೆ ಮೋದಿಯವರ ಮಾತನ್ನು ಉಲ್ಲಂಘಿಸುವ ಕೆಲವರು ಅವರ ಪಕ್ಷದಲ್ಲೇ ಇರುವುದು ಒಂದು ವಿಪರ್ಯಾಸ. ಇನ್ನು ಗಾಂಧಿ, ಮಂತ್ರ ಹೇಳುವ ಕಾಂಗ್ರೆಸ್ಸಿನ ಅನೇಕರು ಅವರನ್ನು ಅನುಸರಿಸುವುದೇ ಇಲ್ಲ. ಅಷ್ಟೇಕೆ ಇಂದಿರಾಗಾಂಧಿಯವರ ರಾಷ್ಟ್ರೀಕರಣ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಕೆಲವು ಯೋಜನೆಗಳ ತಾತ್ವಿಕತೆಯೂ ಇದರಲ್ಲಿ ಇಲ್ಲ. ಕಾಂಗ್ರೇಸ್ಸೇತರ ಪಕ್ಷಗಳಿಗೆ ತುರ್ತು ಪರಿಸ್ಥಿತಿಯ ಸಕಾರಣ ವಿರೋಧದ ಆಚೆಗೆ ನೋಡಲು ಸಾಧ್ಯವಾಗಿಲ್ಲ. ಈ ಮಧ್ಯೆ ದಮನಿತರ ದನಿಯನ್ನು ಪ್ರಾಮಾಣಿಕವಾಗಿ ಕೇಳಿಸಿಕೊಳ್ಳುವ ಪಕ್ಷಗಳು ಕಾಣುತ್ತಿಲ್ಲ. ಪ್ರಗತಿಪರ ಪಕ್ಷಗಳು, ಪಂಥಗಳು, ಪಂಥೀಯರು, ಪ್ರತಿಕ್ರಿಯೆಗಳ ಪರಿಧಿಯಾಚೆಗೆ ಬರಲು ಸಾಧ್ಯವಾಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಸಂವಿಧಾನದ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಗಳು ಸುಳಿಗೆ ಸಿಕ್ಕಿ ಒದ್ದಾಡುತ್ತಿವೆ. ಆರೋಪ ಪ್ರತ್ಯಾರೋಪಗಳೇ ಪ್ರಾತಿನಿಧಿಕವಾಗಿ ವಿಜೃಂಭಿಸುತ್ತಿವೆ. ಡಾ. ಅಂಬೇಡ್ಕರ್ ಕಟ್ಟಿದ ಸಂವಿಧಾನದ ಕಟ್ಟು ಸಡಿಲಗೊಂಡು ದೇಶದ ಕಣ್ಣು, ಕರುಳುಗಳು ಸುಡುತ್ತಿವೆ. ಸುಡುವ ಕಿಡಿಗೆ ಕುಮ್ಮಕ್ಕು ಕೊಡುವ ಕೊರಳುಗಳು ಕೂಗುಮಾರಿಯಾಗುತ್ತಿವೆ.

ಡಾ.ಅಂಬೇಡ್ಕರ್ ಸಂವಿಧಾನ ಸಭೆಯ ಭಾಷಣದಲ್ಲಿ ಹೇಳಿದ್ದರು. 'ಸಂವಿಧಾನ ಎಷ್ಟೇ ಉತ್ತಮವಾಗಿದ್ದರೂ ಅದನ್ನು ಅನುಸರಿಸಿ ಅನುಷ್ಠಾನಗೊಳಿಬೇಕಾದವರು ಕೆಟ್ಟವರಾಗಿದ್ದಾರೆ ಅದು ಕೆಟ್ಟ ಸಂವಿಧಾನವಾಗುತ್ತದೆ. ಸಂವಿಧಾನ ಕೆಟ್ಟದ್ದಾಗಿದ್ದರೂ ಅನುಸರಿಸಿ ಅನುಷ್ಠಾನಗೊಳಿಸಬೇಕಾದವರು ಒಳ್ಳೆಯವರಾಗಿದ್ದರೆ ಒಳ್ಳೆಯ ಸಂವಿಧಾನದಂತೆ ಕಾಣಿಸುತ್ತದೆ,'

ಅದಕ್ಕೆ ಇರಬೇಕು, ಈ ಸಮಸ್ಯೆಯೇ ಬೇಡವೆಂದು ಸಂವಿಧಾನದ ಪ್ರತಿಯನ್ನು ಡಾ. ಅಂಬೇಡ್ಕರ್ ಅವರ ಕೈಗೆ ವಾಪಸ್ ಕೊಟ್ಟು ಪ್ರತಿಮೆಯಾಗಿಸಲಾಗಿದೆ!

ಸಾಭಾರ
(ವಿಜಯ ಕರ್ನಾಟಕ)

ಚಂಪಾರಣ್ಯ ಸತ್ಯಾಗ್ರಹ ನೂರು ವರ್ಷ

– ಮೋ. ಕ. ಗಾಂಧಿ

{ಮಹಾತ್ಮಗಾಂಧೀಜಿಯವರು ಬ್ರೀಟಿಷರ ವಿರುದ್ಧ ನಡೆಸಿದ ಮೊದಲ ಸ್ವಾತಂತ್ರ್ಯ ಹೋರಾಟವಾದ ಚಂಪಾರಣ್ಯ ಸತ್ಯಾಗ್ರಹದ ಬಗ್ಗೆ ಗಾಂಧಿಜಿಯವರೇ ಬರೆದ ನೇರ ವರ್ಣನೆ ಇಲ್ಲಿದೆ.}

ಚಂಪಾರಣ್ಯದ ಬೇಸಾಯಗಾರರ ಸ್ಥಿತಿಗಳನ್ನು ತಿಳಿಯುವುದೂ ಮತ್ತು ಜಮೀನುದಾರರ ವಿಷಯದಲ್ಲಿ ಅವರಿಗಿದ್ದ ಆಕ್ಷೇಪಣೆಗಳನ್ನು ತಿಳಿದುಕೊಳ್ಳುವುದೂ ನನ್ನ ಉದ್ದೇಶವಾಗಿತ್ತು. ಈ ಉದ್ದೇಶಕ್ಕಾಗಿ ಸಾವಿರಾರು ಜನ ರೈತರನ್ನು ನಾನು ಸಂಧಿಸುವುದೂ ಅವಶ್ಯಕವಾಗಿತ್ತು. ಆದರೆ ಈ ವಿಚಾರಣೆಯನ್ನು ಆರಂಭಿಸುವುದಕ್ಕೆ ಮುಂಚಿತವಾಗಿ ಈ ಸಂಬಂಧದಲ್ಲಿ ಜಮೀನುದಾರರ ಪಕ್ಷದ ವಾದವನ್ನು ತಿಳಿಯುವುದೂ, ಡಿವಿಜನ್ ಕಮಿಷನರನ್ನು ನೋಡುವುದೂ ಅತಿ ಮುಖ್ಯವೆಂದು ನಾನು ಎಣಿಸಿದೆ. ನಾನು ಅವರಿಬ್ಬರ ಭೇಟಿಯನ್ನು ಕೋರಿದೆ. ಭೇಟಿಯೂ ದೊರಕಿತು.

ಜಮೀನುದಾರರ ಸಂಘದ ಕಾರ್ಯದರ್ಶಿ ನನಗೆ ಸ್ಪಷ್ಟವಾಗಿ ಹೇಳಿದರು. "ನೀವು ಇಲ್ಲಿಗೆ ಹೊರಗಿನವರು. ಜಮೀನುದಾರರಿಗೂ ಅವರ ರೈತರಿಗೂ ನಡುವೆ ನಿಮಗೇನೂ ಕೆಲಸವಿಲ್ಲ. ಹೇಳುವುದೇನಾದರೂ ಇದ್ದರೆ ಬರೆದುಕೊಡಬಹುದು." ನಾನು ಅವರಿಗೆ ನಮ್ರವಾಗಿ "ನಾನು ಹೊರಗಿನವನೆಂದು ಭಾವಿಸುವುದಿಲ್ಲ. ರೈತರು ತಮ್ಮ ಸ್ಥಿತಿಗಳನ್ನು ಕುರಿತು ನಾನು ವಿಚಾರಿಸಬೇಕೆಂದು ಇಷ್ಟಪಡುವುದಾದರೆ, ಹಾಗೆ ಮಾಡಲು ನನಗೆ ಎಲ್ಲ ಅಧಿಕಾರವೂ ಇದೆ" ಎಂದು ಪ್ರತ್ಯುತ್ತರವಿತ್ತೆ.

ಕಮಿಷರ್‌ರನ್ನು ನಾನು ಭೇಟಿ ಮಾಡಿದಾಗ ಅವರು ನನ್ನನ್ನು ಬೆದರಿಸ ತೊಡಗಿದರು. ನಾನು ತಿರುಹುತ್ತನ್ನು ಬಿಟ್ಟು ಹೋಗಬೇಕೆಂದು ಸೂಚಿಸಿದರು.

ನಾನು ನನ್ನ ಸಹೋದ್ಯೋಗಿಗಳಿಗೆ ಈ ವಿಷಯಗಳನ್ನೆಲ್ಲ ತಿಳಿಸಿದೆ. "ಸರಕಾರ, ನಾನು ಕೆಲಸವನ್ನು ಮುಂದುವರಿಸಲು ಬಿಡುವಂತೆ ತೋರುವುದಿಲ್ಲ. ನನ್ನನ್ನು ಬಂಧಿಸುವ ಸಂಭವವಿದೆ. ನಿರೀಕ್ಷಿಸಿದುದಕ್ಕಿಂತ ಮುಂಚಿತವಾಗಿಯೇ ನಾನು ಜೈಲಿಗೆ ಹೋಗಬೇಕಾಗಬಹುದು. ನನ್ನನ್ನು ಬಂಧಿಸುವುದಾದರೆ, ನನ್ನ ಬಂಧನ ಬೇತಿಯಾ ಅಥವಾ ಮೋತೀಹಾರಿಯಲ್ಲಿ ನಡೆದರೆ ಅತ್ಯುತ್ತಮ. ಆದುದರಿಂದ ನಾನು ಆದಷ್ಟು ಬೇಗ ಅಲ್ಲಿಗೆ ಹೋಗಬೇಕು" ಎಂದು.

ತಿರುಹುತ್ ಡಿವಿಜನ್‌ನ ಒಂದು ಜಿಲ್ಲೆ ಚಂಪಾರಣ್ಯ. ಮೋತೀಹಾರಿ ಅದರ ಮುಖ್ಯ ಪಟ್ಟಣ. ರಾಜಕುಮಾರ್ ಶುಕ್ಲರ ಸ್ಥಳವೂ ಬೇತಿಯಾದ

ಸಮೀಪದಲ್ಲಿಯೇ ಇತ್ತು. ಅದರ ಸುತ್ತಮುತ್ತಲಿನ ರೈತರು ಜಿಲ್ಲೆಯಲ್ಲೆಲ್ಲ ಅತಿ ದರಿದ್ರ ರೈತರಾಗಿದ್ದರು. ರಾಜಕುಮಾರ ಶುಕ್ಲರು ನಾನು ಅವರನ್ನು ನೋಡಬೇಕೆಂದು ಬಯಸಿದರು. ನಾನೂ ಅಷ್ಟೇ ಕಾತರನಾಗಿದ್ದೆ.

ಆದುದರಿಂದ ನಾವು ಅದೇ ದಿವಸ ಮೋತೀಹಾರಿಗೆ ಹೊರಟೆವು. ಬಾಬು ಗೋರಖ್ ಪ್ರಸಾದರು ನಮ್ಮನ್ನೆಲ್ಲ ತಮ್ಮ ಮನೆಯಲ್ಲಿ ಉಳಿಸಿಕೊಂಡರು. ಅದೊಂದು ಧರ್ಮಛತ್ರವಾಯಿತು. ನಮಗೆಲ್ಲರಿಗೂ ಅಲ್ಲಿ ಸ್ಥಳ ಸಾಕಾಗುವಂತೆ ಇರಲಿಲ್ಲ. ಮೋತೀಹಾರಿಯಿಂದ ಐದು ಮೈಲಿ ದೂರದಲ್ಲಿ ರೈತನೊಬ್ಬನ ಮೇಲೆ ಅತ್ಯಾಚಾರ ಅಂದೇ ನಡೆಯಿತೆಂದು ನಮಗೆ ಆ ದಿನವೇ ಗೊತ್ತಾಯಿತು. ಧರಣೀಧರ ಪ್ರಸಾದರ ಜತೆಯಲ್ಲಿ ನಾನು ಮರುದಿವಸ ಬೆಳಿಗ್ಗೆ ಅವನನ್ನು ಹೋಗಿ ನೋಡಬೇಕೆಂದು ತೀರ್ಮಾನವಾಯಿತು. ಅದರಂತೆ ಮರುದಿನ ಬೆಳಗ್ಗೆ ನಾವು ಆನೆಯ ಮೇಲೆ ಕುಳಿತು ಹೊರಟೆವು. ಗುಜರಾತಿನಲ್ಲಿ ಎತ್ತಿನ ಗಾಡಿ ಹೇಗೆ ಸಾಮಾನ್ಯವೋ, ಚಂಪಾರಣ್ಯದಲ್ಲಿ ಆನೆಯೂ ಹಾಗೆ ಸಾಧಾರಣ. ನಾವು ಅರ್ಧ ದಾರಿ ಹೋಗುವುದಕ್ಕೆ ಮುಂಚಿತವಾಗಿಯೇ ಪೋಲೀಸ್ ಸೂಪರಿಂಟೆಂಡೆಂಟ್‌ರ ನೌಕರನೊಬ್ಬನು ಹಿಂದಿನಿಂದ ಬಂದು ನಮ್ಮನ್ನು ಹಿಡಿದು, ಪೋಲೀಸ್ ಸೂಪರಿಂಟೆಂಡೆಂಟರು ನನಗೆ ವಂದನೆಗಳನ್ನು ತಿಳಿಸಿರುವುದಾಗಿ ಹೇಳಿದನು. ಅವನ ಅಭಿಪ್ರಾಯವೇನೆಂಬುದು ನನಗೆ ಗೊತ್ತಾಯಿತು. ತಮ್ಮ ಪ್ರಯಾಣವನ್ನು ಮೊದಲಿನಂತೆ ಮುಂದುವರಿಸಲು ಧರಣೀಧರ ಬಾಬುಗಳನ್ನು ಬಿಟ್ಟು, ನಾನು ಆ ನೌಕರನು ತಂದಿದ್ದ ಬಾಡಿಗೆ ಗಾಡಿಯನ್ನು ಏರಿದೆ. ಅನಂತರ ಆ ನೌಕರ ನಾನು

ಚಂಪಾರಣ್ಯವನ್ನು ಬಿಡಬೇಕೆಂದು ನನಗೆ ಒಂದು ಎಚ್ಚರಿಕೆಯ ಪತ್ರವನ್ನು ಜಾರಿಮಾಡಿ ನನ್ನ ಸ್ಥಳಕ್ಕೆ ನನ್ನನ್ನು ಕರೆದೊಯ್ದನು. ಎಚ್ಚರಿಕೆ ಪತ್ರವನ್ನು ನಾನು ತೆಗೆದುಕೊಂಡುದದಕ್ಕೆ ಸಹಿ ಹಾಕಬೇಕೆಂದು ಅವನು ನನ್ನನ್ನು ಕೇಳಲು ನಾನು ಅದರ ಮೇಲೆ ಹೀಗೆ ಬರೆದನು. "ಈ ಎಚ್ಚರಿಕೆ ಪತ್ರದಂತೆ ನಡೆಯುವುದು ನನ್ನ ಇಷ್ಟವಿಲ್ಲ. ನಾನು ಮಾಡಬೇಕಾದ ವಿಚಾರಣೆ ಮುಗಿಯುವವರೆಗೆ ನಾನು ಚಂಪಾರಣ್ಯವನ್ನು ಬಿಡುವುದಿಲ್ಲ". ಅದಾದನಂತರ, ಚಂಪಾರಣ್ಯವನ್ನು

ಬಿಡಬೇಕೆಂಬ ಅಪ್ಪಣೆಗೆ ವ್ಯತಿರಿಕ್ತವಾಗಿ ನಡೆದುದಕ್ಕಾಗಿ ನನ್ನನ್ನು ಮರುದಿನ ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಒಳಪಡಿಸಿರುವುದಾಗಿ ಕರೆ ಬಂದಿತು. ನಾನು ರಾತ್ರಿಯೆಲ್ಲ ಎಚ್ಚರವಾಗಿದ್ದು ಕಾಗದಗಳನ್ನು ಬರೆಯುವುದರಲ್ಲಿಯೂ ಬ್ರಜ್‌ಕಿಶೋರ್ ಬಾಬುಗಳಿಗೆ ಸಲಹೆಯನ್ನು ಕೊಡುವುದರಲ್ಲಿಯೂ ಕಳೆದೆ.

ಕರೆ ಮತ್ತು ಎಚ್ಚರಿಕೆ ಪತ್ರಗಳನ್ನು ನನಗೆ ಜಾರಿಮಾಡಿದುದು ಕಾಡ್ಗಿಚ್ಚಿನಂತೆ ಹಬ್ಬಿತು. ಆ ದಿನ ಮೋತೀಹಾರಿಯಲ್ಲಿ ಹಿಂದೆಂದೂ ಕಾಣದಿದ್ದ ದೃಶ್ಯ ಕಂಡಿತೆಂದು

ನನಗೆ ಹೇಳಿದರು. ಗೋರಖಬಾಬುವಿನ ಮನೆಯಲ್ಲಿಯೂ, ನ್ಯಾಯಸ್ಥಾನದಲ್ಲಿಯೂ ಜನ ತುಂಬಿದ್ದರು. ಅದೃಷ್ಟವಶದಿಂದ ನಾನು ಕೆಲಸಗಳನ್ನೆಲ್ಲ ರಾತ್ರಿಯೇ ಮುಗಿಸಿಬಿಟ್ಟಿದ್ದೆ. ಆದುದರಿಂದ ಜನರ ಗುಂಪನ್ನು ಸ್ಥಿಮಿತದಲ್ಲಿಡಲು ಸಾಧ್ಯವಾಯಿತು. ನನ್ನ ಜತೆಗಾರರಿಂದ ಬಹಳ ಸಹಾಯವಾಯಿತು. ಅವರು ಜನರ ಗುಂಪನ್ನು ಹತೋಟಿಯಲ್ಲಿಡುವ ಕಾರ್ಯದಲ್ಲಿ ತೊಡಗಿದರು. ಏಕೆಂದರೆ ಗುಂಪು ನಾನು ಹೋದೆಡೆಗಳಲ್ಲೆಲ್ಲ ನನ್ನನ್ನು ಅನುಸರಿಸುತ್ತಿದ್ದಿತು. ಕಲೆಕ್ಟರ್, ಮ್ಯಾಜಿಸ್ಟ್ರೇಟ್, ಪೊಲೀಸ್ ಸೂಪರಿಂಟೆಂಡೆಂಟರು, ಇವರಿಗೂ ನನಗೂ ಒಂದು ಬಗೆಯ ಸ್ನೇಹವೇ ಬೆಳೆಯಿತು. ನಾನು ಅವರ ಎಚ್ಚರಿಕೆ ಪತ್ರಗಳನ್ನು ಕಾನೂನುಬದ್ಧವಾಗಿ ಪ್ರತಿಭಟಿಸಬಹುದಾಗಿತ್ತು. ಅದರ ಬದಲು ಅವನ್ನೆಲ್ಲ ನಾನು ಅಂಗೀಕರಿಸಿದ್ದೆ. ಅವರ ವಿಷಯದಲ್ಲಿ ನನ್ನ ನಡತೆ ಸ್ನೇಹಪೂರ್ಣವಾಗಿತ್ತು. ನಾನು ಅವರನ್ನು ವ್ಯಕ್ತಿಶಃ ವಿರೋಧಿಸುತ್ತಿಲ್ಲ. ಸವಿನಯವಾಗಿ ಅವರ ಅಪ್ಪಣೆಗಳನ್ನು ವಿರೋಧಿಸುವುದು ನನ್ನ ಉದ್ದೇಶವೆಂಬುದು ಅವರಿಗೆ ತಿಳಿಯಿತು. ಅವರ ಮನಸ್ಸು ಸಮಾಧಾನವಾಗಿ, ನನ್ನನ್ನು ಪೀಡಿಸುವುದಕ್ಕೆ ಬದಲಾಗಿ, ಜನರ ಗುಂಪನ್ನು ಹತೋಟಿಯಲ್ಲಿಡುವುದರಲ್ಲಿ ನನ್ನ ಮತ್ತು ನನ್ನ ಸಂಗಡಿಗರ ಸಹಾಯವನ್ನು ಸಂತೋಷದಿಂದ ಅಂಗೀಕರಿಸಿದರು. ಆದರೆ ಇದು

ಅವರಿಗೆ "ಸರಕಾರದ ಅಧಿಕಾರ ಕುಸಿದು ಬಿದ್ದಿತು" ಎಂಬುದರ ಪ್ರತ್ಯಕ್ಷ ಪ್ರದರ್ಶನವಾಯಿತು. ಜನ ಆ ಗಳಿಗೆಯಲ್ಲಿ ದಂಡನೆಯ ಭಯವನ್ನೆಲ್ಲ ತೊರೆದು ತಮ್ಮ ಹೊಸ ಮಿತ್ರರು ತೋರಿಸಿದ ಸ್ನೇಹದ ಶಕ್ತಿಗೆ ವಿಧೇಯರಾಗಿದ್ದರು.

ಚಂಪಾರಣ್ಯದಲ್ಲಿ ನನ್ನನ್ನು ಯಾರೂ ಅರಿತಿರಲಿಲ್ಲವೆಂಬುದು ನೆನಪಿರಬೇಕು. ರೈತರೆಲ್ಲ ಏನೂ ಅರಿಯದವರಾಗಿದ್ದರು. ಗಂಗಾನದಿಯ ಉತ್ತರಕ್ಕೆ ಬಹುದೂರವಾಗಿ, ಹಿಮಾಲಯದ ಬುಡದಲ್ಲಿ, ನೇಪಾಳದ ಸಮೀಪದಲ್ಲಿ ಚಂಪಾರಣ್ಯ ಭಾರತದ ಇತರ ಭಾಗದಿಂದ ಸಂಪರ್ಕವಿಲ್ಲದೆ ಇತ್ತು. ಆ ಭಾಗದ ಜನರಿಗೆ ಕಾಂಗ್ರೆಸ್ಸಿನ ಹೆಸರೇ ಗೊತ್ತಿರಲಿಲ್ಲ. ಕಾಂಗ್ರೆಸ್ ಹೆಸರನ್ನು ಕೇಳಿದ್ದವರು ಅದನ್ನು ಸೇರಲು ಅಥವಾ ಅದರ ಹೆಸರನ್ನು ಉಚ್ಚರಿಸಲು ಹೆದರುತ್ತಿದ್ದರು. ಆದರೆ ಈಗ ಕಾಂಗ್ರೆಸ್ ಮತ್ತು ಅದರ ಸದಸ್ಯರು ಕಾಂಗ್ರೆಸ್ಸಿನ ಹೆಸರಿನಲ್ಲಿ ಅಲ್ಲಿದಿದ್ದರೂ ಅದಕ್ಕಿಂತ ಹೆಚ್ಚಾಗಿ ಅದರ ಅರ್ಥದಲ್ಲಿ ಚಂಪಾರಣ್ಯವನ್ನೂ ಪ್ರವೇಶಿಸಿದ್ದರು.

ನನ್ನ ಜತೆಗಾರರ ಸಲಹೆಯನ್ನು ಪಡೆದು, ಕಾಂಗ್ರೆಸ್ಸಿನ ಹೆಸರಿನಲ್ಲಿ ಏನನ್ನೂ ಮಾಡಕೂಡದೆಂದು ನಾನು ನಿರ್ಧರಿಸಿದ್ದೆ. ನಮಗೆ ಬೇಕಾಗಿದ್ದುದು ತಿರುಳೇ ಹೊರತು ನೆರಳಲ್ಲ. ಏಕೆಂದರೆ ಸರಕಾರವೂ ಅದರ ಸೂತ್ರಧಾರರಾದ

ಜಮೀನುದಾರರೂ ಕಾಂಗ್ರೆಸ್ಸನ್ನು ವಿರೋಧದಿಂದ ಕಾಣುತ್ತಿದ್ದರು. ಅವರ ಅಭಿಪ್ರಾಯದಲ್ಲಿ ಕಾಂಗ್ರೆಸ್ ವಕೀಲರುಗಳ ವಾಗ್ವಾದ, ಕಾನೂನಿನ ದೋಷಗಳನ್ನು ಕಂಡುಹಿಡಿದು ಕಾನೂನು ಬಾಹಿರ ಕಾರ್ಯಗಳನ್ನು ಮಾಡುವುದು, ಬಾಂಬು, ಅರಾಜಕ ಕೃತ್ಯಗಳು, ರಾಜತಂತ್ರ ಮತ್ತು ಬೂಟಾಟಿಕೆ, ಇವುಗಳ ಪ್ರತೀಕವಾಗಿದ್ದಿತು. ನಾವು ಸರಕಾರ ಮತ್ತು ಜಮೀನುದಾರರ ಕಣ್ಣುಗಳನ್ನು ತೆರೆಸಬೇಕಾಗಿತ್ತು. ಆದುದರಿಂದ ನಾವು ಕಾಂಗ್ರೆಸ್ ಹೆಸರನ್ನು ಉಚ್ಚರಿಸಬಾರದು. ರೈತರಿಗೆ ಕಾಂಗ್ರೆಸ್ ಎಂಬ ಸಂಸ್ಥೆಯ ಹೆಸರನ್ನು ಪರಿಚಯ ಮಾಡಿಸಬಾರದು ಎಂದು ನಿರ್ಧರಿಸಿದೆವು. ಅವರು ಕಾಂಗ್ರೆಸ್ ಹೆಸರಿಗಿಂತ ಹೆಚ್ಚಾಗಿ ಅದರ ತತ್ವಗಳನ್ನು ತಿಳಿದುಕೊಂಡು ಅದನ್ನು ಅನುಸರಿಸಿದರೆ ಸಾಕು ಎಂಬುದು ನಮ್ಮ ಅಭಿಪ್ರಾಯವಾಗಿತ್ತು.

ಆದುದರಿಂದ ನಮ್ಮ ಬರುವಿಕೆಗಾಗಿ ಅಲ್ಲಿ ಸಿದ್ಧಮಾಡಲು ಕಾಂಗ್ರೆಸ್ಸಿನ ಪರವಾಗಿ ರಹಸ್ಯವಾಗಿಯಾಗಲೀ, ಬಹಿರಂಗವಾಗಿಯಾಗಲೀ ದೂತರನ್ನು ಕಳುಹಿಸರಲಿಲ್ಲ. ರಾಜಕುಮಾರ್ ಶುಕ್ಲರು ಆ ಸಹಸ್ರಾರು ರೈತರ ಸಂಪರ್ಕವನ್ನು ಹೊಂದಲು ಅಸಮರ್ಥರಾಗಿದ್ದರು. ಅವರ ಮಧ್ಯೆ ರಾಜಕೀಯ ಕಾರ್ಯವನ್ನೇನೂ ಮಾಡಿರಲಿಲ್ಲ. ಅವರಿಗೆ ಚಂಪಾರಣ್ಯದ ಹೊರಗಿನ ಪ್ರಪಂಚವೇ ತಿಳಿದಿರಲಿಲ್ಲ. ಆದರೂ ಸಹ ಅವರು ನನ್ನನ್ನು ಬಹುಕಾಲದ ಮಿತ್ರನಂತೆ ಸ್ವೀಕರಿಸಿದರು. ಈ ರೀತಿ ನಾನು ರೈತರನ್ನು ಸಂಧಿಸಿದಾಗ ದೇವರು, ಅಹಿಂಸೆ ಮತ್ತು ಸತ್ಯದ ಸಮ್ಮುಖದಲ್ಲಿದ್ದೆನೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಈ ಸಾಕ್ಷಾತ್ಕಾರವಾಗಲು ನನಗಿದ್ದ ಅಧಿಕಾರವಾವುದು ಎಂದು ನಾನು ಪರೀಕ್ಷಿಸುವಾಗ, ಜನಗಳಲ್ಲಿರುವ ನನ್ನ ಪ್ರೇಮದ ಹೊರತು ನನಗೆ ಮತ್ತೇನೂ ಕಾಣುವುದಿಲ್ಲ.

ಕಾನೂನಿಗನುಸಾರವಾಗಿ ನನ್ನ ವಿಚಾರಣೆಯಾಗಬೇಕಾಗಿತ್ತು. ಆಧರೆ ವಾಸ್ತವವಾಗಿ ಅಂದು ಆಗುತ್ತಿದ್ದುದು ಸರಕಾರದ ವಿಚಾರಣೆ. ನನಗಾಗಿ ಸಿದ್ಧಮಾಡಿದ್ದ ಬಲೆಗೆ ಸರಕಾರವನ್ನೇ ಕೆಡಹುವುದರಲ್ಲಿ ಕಮಿಷನರ್ ಜಯಶಾಲಿಗಳಾದರು.

ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಂಡುದು

ವಿಚಾರಣೆ ಪ್ರಾರಂಭವಾಯಿತು. ಸರಕಾರದ ವಕೀಲರು, ಮ್ಯಾಜಿಸ್ಟ್ರೇಟರು ಮತ್ತು ಇತರ ಅಧಿಕಾರಿಗಳೆಲ್ಲ ಯೋಚನೆಯಿಂದ ದಿಕ್ಕು ತೋರದವರಾಗಿದ್ದರು. ತಾವು ಏನು ಮಾಡಬೇಕೆಂಬುದು ಅವರಿಗೆ ತೋರಲಿಲ್ಲ. ಸರಕಾರಿ ವಕೀಲರು ಮೊಕದ್ದಮೆಯನ್ನು ಮುಂದೂಡಬೇಕೆಂದು ಮ್ಯಾಜಿಸ್ಟ್ರೇಟರನ್ನು ಒತ್ತಾಯಪಡಿಸುತ್ತಿದ್ದರು. ಆದರೆ ನಾನು ಮಧ್ಯೆ ಬಾಯಿ ಹಾಕಿ "ಮೊಕದ್ದಮೆಯನ್ನು ದಯವಿಟ್ಟು ಮುಂದೂಡಬೇಡಿ. ಚಂಪಾರಣ್ಯವನ್ನು ಬಿಟ್ಟು ಹೋಗಬೇಕೆಂಬ

ಸರಕಾರಿ ಅಪ್ಪಣೆಯನ್ನು ನಾನು ಮೀರಿದ್ದೇನೆ, ನಾನು ತಪ್ಪಿತಸ್ಥನೆಂದು ಒಪ್ಪುತ್ತೇನೆ" ಎಂದು ಹೇಳಿ ಮುಂದಿನ ಹೇಳಿಕೆಯನ್ನು ಓದಿದೆನು.

ಕ್ರಿಮಿನೆಲ್ ಪ್ರೋಸಿಜರ್ ಕೋಡಿನ ೧೪೪ನೆಯ ಅಧಿನಿಯಮದ ಪ್ರಕಾರ ಸರಕಾರ ನನ್ನ ಮೇಲೆ ಜಾರಿ ಮಾಡಿದ ಅಪ್ಪಣೆಯನ್ನು ತಿರಸ್ಕರಿದಂತೆ ತೋರುವ ಈ ಗಂಭೀರವಾದ ಹೆಜ್ಜೆಯನ್ನು ನಾನು ಏಕೆ ಇಟ್ಟೆ ಎಂಬುದನ್ನು ವಿವರಿಸುವ ಹೇಳಿಕೆಯುನ್ನು, ನ್ಯಾಯಾಸ್ಥಾನದ ಅಪ್ಪಣೆ ಪಡೆದು, ಸಂಕ್ಷೇಪವಾಗಿ ಹೇಳಲೆತ್ನಿಸುತ್ತೇನೆ. ಇದು ಸ್ಥಳದ ಅಧಿಕಾರಿಗಳಿಗೂ ನನಗೂ ಇರುವ ಭಿನ್ನಾಭಿಪ್ರಾಯಾದ ಪ್ರಶ್ನೆ ಎಂಬುದು ನನ್ನ ಅಭಿಪ್ರಾಯ. ನಾನು ಪ್ರಾಂತ್ಯಕ್ಕೆ ಬಂದಿರುವುದು ಜನೋಪಕಾರವನ್ನೂ, ರಾಷ್ಟಸೇವೆಯನ್ನೂ ಮಾಡುವುದಕ್ಕಾಗಿ. ನಾನು ಹೀಗೆ ಮಾಡಿರುವುದು ರೈತರ ಒತ್ತಾಯಪೂರ್ವಕ ಪ್ರಾರ್ಥನೆಯಂತೆ. ನೀಲಿಯ ಜಮೀನುದಾರರು ತಮ್ಮೊಂದಿಗೆ ನ್ಯಾಯವಾಗಿ ನಡೆಯುತ್ತಿಲ್ಲವೆಂಬುದು ರೈತರ ಸ್ಪಷ್ಟವಾದ ವಾದ. ಪ್ರಶ್ನೆಯನ್ನು ಸರಿಯಾಗಿ ವ್ಯಾಸಂಗ ಮಾಡದೆ, ಯಾವ ಸಹಾಯವನ್ನೂ ಮಾಡುವುದು ನನ್ನಿಂದ ಸಾಧ್ಯವಿರಲಿಲ್ಲ. ಆದುದರಿಂದ ನಾನು ಪ್ರಶ್ನೆಯನ್ನು ಅಧ್ಯಯನ ಮಾಡಲು ಇಲ್ಲಿಗೆ ಬಂದಿದ್ದೇನೆ. ಈ ಕಾರ್ಯದಲ್ಲಿ ಸಾಧ್ಯವಾದರೆ, ಜಮೀನುದಾರರ ಮತ್ತು ಸ್ಥಳದ ಅಧಿಕಾರಿಗಳ ಸಹಾಯವನ್ನು ಪಡೆಯುವುದು ನನ್ನ ಉದ್ದೇಶ. ನನಗೆ ಮತ್ತೇನೂ ಉದ್ದೇಶವಿಲ್ಲ. ನಾನು ಇಲ್ಲಿ ಬಂದುದರಿಂದ ಸಾರ್ವಜನಿಕ ಶಾಂತಿ ಭಂಗವಾಗುತ್ತದೆ. ಮತ್ತು ಪ್ರಾಣಹಾನಿಯಾಗುತ್ತದೆ ಎಂಬುದನ್ನು ನಾನು ನಂಬುವುದಿಲ್ಲ. ಇಂತಹ ವಿಷಯದಲ್ಲಿ ನನಗೆ ತಕ್ಕಮಟ್ಟಿನ ಅನುಭವವಿದೆ ಎಂದು ಹೇಳಿಕೊಳ್ಳುತ್ತೇನೆ. ಆದರೆ ಸರಕಾರದವರು ಬೇರೆ ರೀತಿಯಾಗಿ ಯೋಚಿಸಿದ್ದಾರೆ. ಅವರ ಕಷ್ಟ ನನಗೆ ಚೆನ್ನಾಗಿ ಅರ್ಥವಾಗುತ್ತಿದೆ. ತಮಗೆ ಬಂದ ಸುದ್ಧಿಗಳ ಆಧಾರದ ಮೇಲೆ ಮಾತ್ರ ಅವರು ಕಾರ್ಯಮಾಡಬಲ್ಲರೆಂಬುದೂ ನನಗೆ ಅರ್ಥವಾಗುತ್ತದೆ. ಕಾನೂನಿಗನುಸಾರವಾಗಿ ನಡೆಯುವ ನನ್ನ ಮನಸ್ಸಿನ ಮೊದಲನೆಯ ಪ್ರವೃತ್ತಿ ನನ್ನ ಮೇಲೆ ಜಾರಿಯಾದ ಅಪ್ಪಣೆಯನ್ನು ಪಾಲಿಸಬೇಕೆಂಬುದು ಆದರೆ ಯಾರಿಗೊಸ್ಕರವಾಗಿ ನಾನು ಇಲ್ಲಿ ಬಂದಿದ್ದೇನೆಯೋ ಅವರ ವಿಷಯದಲ್ಲಿ ಕರ್ತವ್ಯಭ್ರಷ್ಟನಾಗದೆ ಹೀಗೆ ಮಾಡುವುದು ನನ್ನಿಂದ ಸಾಧ್ಯವಿರಲಿಲ್ಲ. ಅವರ ಜತೆಯಲ್ಲಿದ್ದುಕೊಂಡು ಅವರ ಸೇವೆಯನ್ನು ಮಾಡುವುದು ಸಾಧ್ಯವೆಂದು ನಾನು ಭಾವಿಸುತ್ತೇನೆ. ಆದುದರಿಂದ ನಾನು ಸ್ವಂತ ಇಚ್ಛೆಯಿಂದ ಹಿಂದೆಗೆಯುವುದು ಸಾಧ್ಯವಿಲ್ಲ. ಭಾರತದ ಸಾರ್ವಜನಿಕ ಜೀವನದಲ್ಲಿ ನನ್ನಂತಹ ಸ್ಥಾನವನ್ನು ಹೊಂದಿರುವವನು ಸರಿಯಾದ ಮೇಲ್ಪಂಕ್ತಿಯನ್ನು ಹಾಕಬೇಕೆಂಬುದು ನನಗೆ ಚೆನ್ನಾಗಿ ಅರಿವಾಗಿದೆ. ನಾವು ಇಂದು ಬಹಳ ತೊಡಕಾದ ರಾಜಕೀಯ

ಸಂವಿಧಾನದಡಿಯಲ್ಲಿ ಬಾಳುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಆತ್ಮಗೌರವವುಳ್ಳ ನನ್ನನ್ನು ಇದಿರಿಸುತ್ತಿರುವ ಪ್ರಶ್ನೆಗೆ ಉತ್ತರವಾಗಿ ನಾನು ಅನುಸರಿಸಲು ತೀರ್ಮಾನಿಸಿರುವುದೇ ನಿರುಪಾಯವಾದ ಮತ್ತು ಮಾನವಾದ ಮಾರ್ಗ. ಪ್ರತಿಭಟಿಸದೆ ಆಜ್ಞೋಲ್ಲಂಘನೆಯ ಶಿಕ್ಷೆಗೆ ಒಳಗಾಗುವುದು."

"ನನಗೆ ಕೊಡಬೇಕಾದ ದಂಡನೆಯನ್ನು ಯಾವ ರೀತಿಯಲ್ಲಾದರೂ ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದಲ್ಲ ಈ ಹೇಳಿಕೆಯನ್ನು ಕೊಟ್ಟಿರುವುದು. ಆದರೆ ನನ್ನ ಮೇಲೆ ಜಾರಿ ಮಾಡಿದ ಆಜ್ಞೆಯನ್ನು ಉಲ್ಲಂಘಿಸಿರುವುದು ಕಾನೂನಿನಲ್ಲಿ ನನಗೆ ಗೌರವವಿಲ್ಲದುದರಿಂದಲ್ಲ. ಇದಕ್ಕಿಂತ ದೊಡ್ಡ ಕಾನೂನನ್ನು ಅಂದರೆ ನಮ್ಮ ಅಂತರಾತ್ಮದ ಆಜ್ಞೆಯನ್ನು ಪಾಲಿಸುವುದಕ್ಕಾಗಿಯೇ ಎಂಬುದನ್ನು ತೋರಿಸುವುದಕ್ಕಾಗಿ."

ಮೊಕದ್ದಮೆಯನ್ನು ಮುಂದೂಡಲು ಅವಕಾಶವೇ ಇರಲಿಲ್ಲ. ಆದರೆ ಮ್ಯಾಜಿಸ್ಟ್ರೇಟರು ಮತ್ತು ಸರಕಾರಿ ವಕೀಲರು ಈ ಅನಿರೀಕ್ಷಿತ ಪರಿಸ್ಥಿತಿಗೆ ಒಳಗಾದುದರಿಂದ ಮ್ಯಾಜಿಸ್ಟ್ರೇಟರು ತೀರ್ಪನ್ನು ಮುಂದಕ್ಕೆ ಹಾಕಿದರು. ಈ ಮಧ್ಯೆ ನಾನು ವೈಸರಾಯ್‌ರಿಗೂ, ಪಾಟ್ನಾ ಮಿತ್ರರಿಗೂ, ಪಂಡಿತ ಮದನ ಮೋಹನ ಮಾಲವೀಯ ಮುಂತಾದವರಿಗೂ ಎಲ್ಲ ವಿಷಯಗಳನ್ನೂ ತಾರಿನ ಮೂಲಕ ತಿಳಿಸಿದ್ದೆ.

ನಾನು ತೀರ್ಪನ್ನು ಅಂಗೀಕರಿಸಲು ನ್ಯಾಯಾಸ್ಥಾನದಲ್ಲಿ ಹಾಜರಾಗುವುದಕ್ಕೆ ಮುಂಚಿತವಾಗಿಯೇ ಮ್ಯಾಜಿಸ್ಟ್ರೇಟರು ನನಗೆ ಒಂದು ಪತ್ರವನ್ನು ಕಳುಹಿಸಿ ಲೆಫ್ಟಿನೆಂಟ್ ಗವರ್ನರ್‌ರವರು ನನ್ನ ಮೇಲೆ ಹೂಡಿದ್ದ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಅಪ್ಪಣೆ ಮಾಡಿರುವುದಾಗಿ ತಿಳಿಸಿದರು. ಕಲೆಕ್ಟರರೂ ಸಹ " ನೀವು ಮಾಡಬೇಕೆಂದಿರುವ ವಿಚಾರಣೆಯನ್ನು ನೀವು ನಡೆಸಬಹುದು," ಎಂದು ಬರೆದರು. ಇಷ್ಟು ಬೇಗ ಇಂತಹ ಒಳ್ಳೆಯ ಪರಿಣಾಮ ಒದಗುವುದೆಂದು ನಾವು ಯಾರೂ ನಿರೀಕ್ಷಿಸಿರಲಿಲ್ಲ.

ನಾನು ಕಲೆಕ್ಟರ್ ಮಿ.ಹೆಕಾಕ್‌ರನ್ನು ಹೋಗಿ ನೋಡಿದೆ. ಅವರು ನ್ಯಾಯನಿಷ್ಠರಾದ ಒಳ್ಳೆಯವರಂತೆ ಕಂಡರು. ನನಗೆ ನೋಡಬೇಕೆನಿಸಿದ ಕಾಗದ ಪತ್ರಗಳನ್ನು ನಾನು ನೋಡಬಹುದೆಂದೂ ನನಗೆ ಬೇಕಾದಾಗ ಅವರ ಭೇಟಿಯನ್ನೂ ಮಾಡಬಹುದೆಂದೂ ಅವರು ನನಗೆ ತಿಳಿಸಿದರು.

ಹೀಗೆ ದೇಶಕ್ಕೆ ಸವಿನಯ ಕಾಯಿದೆ ಭಂಗದಲ್ಲಿ ಪ್ರಥಮ ಪಾಠ ದೊರಕಿತು. ಸ್ಥಳದಲ್ಲಿಯೂ ಪತ್ರಿಕೆಗಳಲ್ಲಿಯೂ ವಿಷಯ ಯಥೇಚ್ಛವಾಗಿ ಚರ್ಚಿಸಲ್ಪಟ್ಟಿತು. ನನ್ನ ಕಾರ್ಯಕ್ಕೆ ಅನಿರೀಕ್ಷಿತವಾದ ಪ್ರಾಚಾರ ದೊರೆಯಿತು.

ನಾನು ಮಾಡಬೇಕಾಗಿದ್ದ ವಿಚಾರಣೆಗೆ ಸರಕಾರ ನಿಷ್ಪಕ್ಷವಾಗಿರುವುದು.

ಅವಶ್ಯಕವಾಗಿತ್ತು. ಆದರೆ ವಿಚಾರಣೆಗೆ ಪತ್ರಿಕೆಗಳ ವರದಿಗಳ ಅಥವಾ ಸಂಪಾದಕೀಯ ಲೇಖನಗಳ ಅವಶ್ಯಕತೆಯಿರಲಿಲ್ಲ. ಚಂಪಾರಣ್ಯದ ಪರಿಸ್ಥಿತಿಯು ಅತ್ಯಂತ ಸೂಕ್ಷ್ಮವೂ ಕ್ಲಿಷ್ಟವೂ ಆಗಿತ್ತು. ಅತ್ಯುತ್ಸಾಹದ ಟೀಕೆ ಅಥವಾ ತುಂಬಾ ವರ್ಣರಂಜಿತ ಅತಿಶಯೋಕ್ತಿ. ನಾನು ಪ್ರವೃತ್ತನಾಗಿದ್ದ ಕಾರ್ಯಕ್ಕೆ ಸುಲಭವಾಗಿ ಹಾನಿಯನ್ನುಂಟು ಮಾಡಬಹುದಾಗಿತ್ತು. ಆದುದರಿಂದ ನಾನು ಮುಖ್ಯವಾದ ಪತ್ರಿಕೆಗಳ ಸಂಪಾದಕರಿಗೆ "ನಿಮ್ಮ ವರದಿಗಾರರನ್ನು ಕಳುಹಿಸುವ ಶ್ರಮವನ್ನು ವಹಿಸಬೇಡಿ. ಪ್ರಕಟಣೆಗೆ ಯಾವುದು ಅವಶ್ಯಕವೋ ಅದನ್ನು ನಾನೇ ನಿಮಗೆ ಕಳುಹಿಸುತ್ತೇನೆ. ನಿಮಗೆ ವಿಷಯವನ್ನು ತಿಳಿಸುತ್ತೇನೆ" ಎಂದು ಬರೆದೆ.

ನಾನು ಅಲ್ಲಿ ನಿಲ್ಲುವುದಕ್ಕೆ ಸರಕಾರವು ಒಪ್ಪಿದುದು ಜಮೀನುದಾರರಿಗೆ ಅಸಮಾಧಾನವನ್ನುಂಟುಮಾಡಿದ್ದಿತೆಂಬುದು ನನಗೆ ಗೊತ್ತಿತ್ತು. ಅಧಿಕಾರಿಗಳಿಗೂ ಸಹ ಬಹಿರಂಗವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲವಾದರೂ, ಇದು ಇಷ್ಟವಿರಲಿಲ್ಲವೆಂಬುದೂ ನನಗೆ ಗೊತ್ತಿತ್ತು. ಆದುದರಿಂದ ಸರಿಯಲ್ಲದ ಅಥವಾ ತಪ್ಪು ಅಭಿಪ್ರಾಯ ಕೊಡುವ ವರದಿಗಳು ಪ್ರಕಟವಾದಲ್ಲಿ ಅವರ ಕೋಪ ಇನ್ನೂ ಹೆಚ್ಚಾಗಿ ಪಿತ್ತ ಕೆರಳುತ್ತಿತ್ತು. ಆ ಕೋಪ ನನ್ನ ಮೇಲೆ ಬೀಳುವ ಬದಲು ಏನೂ ಅರಿಯದ ಭಯಸ್ಥ ರೈತರ ಮೇಲೆ ಬಿದ್ದು, ಈ ವಿಷಯದಲ್ಲಿ ನಾನು ಮಾಡುತ್ತಿದ್ದ ಸತ್ಯಾನ್ವೇಷಣೆಗೆ ದೊಡ್ಡ ಅಡಚಣೆಯಾಗಬಹುದಾಗಿತ್ತು.

ಈ ಎಲ್ಲ ಎಚ್ಚರಿಕೆಯನ್ನೂ ನಾನು ವಹಿಸಿದ್ದರೂ, ಜಮೀನುದಾರರು ನನಗೆ ವಿರೋಧವಾಗಿ ಒಂದು ವಿಷಪೂರಿತ ಚಳಿವಳಿಯನ್ನೇ ಹೂಡಿದರು. ನನ್ನನ್ನೂ, ನನ್ನ ಸಂಗಡಿಗರ ಕೆಲಸಗಾರರನ್ನೂ ಕುರಿತು ಪತ್ರಿಕೆಗಳಲ್ಲಿ ಬಗೆ ಬಗೆಯ ಸುಳ್ಳುಗಳು ಪ್ರಕಟವಾದವು. ಆದರೆ ನನ್ನ ವಿಶೇಷವಾದ ಜಾಗರೂಕತೆ, ಅತ್ಯಂತ ಸಣ್ಣ ವಿಷಯದಲ್ಲಿಯೂ ಸತ್ಯವನ್ನೇ ಹೇಳಬೇಕೆಂಬ ನನ್ನ ಒತ್ತಾಯ, ಇವು ಅವರ ಕತ್ತಿಯನ್ನು ಅವರ ಕಡೆಗೇ ತಿರುಗಿಸಿದವು.

ಬ್ರಜ್‌ಕಿಶೋರ್‌ಬಾಬುರ ಮುಖಕ್ಕೆ ಮಸಿ ಬಳಿಯಲು ತೋಟಗಾರರು ತಮ್ಮ ಪ್ರಯತ್ನಗಳನ್ನೆಲ್ಲ ಮಾಡಿದರು. ಆದರೆ ಅವರ ಮುಖಕ್ಕೆ ತೋಟಗಾರರು ಮಣ್ಣೆರಚಿದಷ್ಟೂ, ಬಾಬುಗಳಲ್ಲಿ ಜನತೆಯ ಮನ್ನಣೆ ಏರುತ್ತಾ ಹೋಯಿತು.

ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಇತರ ಪ್ರಾಂತ್ಯಗಳಿಂದ ಮುಖಂಡರನ್ನು ಆಹ್ವಾನಿಸುವುದು ಉಚಿತವೆಂದು ನಾನು ಭಾವಿಸಲಿಲ್ಲ. ಪಂಡಿತ ಮಾಳವೀಯರು "ನಾನು ಅಲ್ಲಿಗೆ ಬರುವ ಅವಶ್ಯಕತೆಯಿದ್ದರೆ ನನಗೆ ತಿಳಿಸಿದರೆ ಸಾಕು, ಬರುತ್ತೇನೆ" ಎಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ನಾನು ಅವರಿಗೆ ತೊಂದರೆ ಕೊಡಲಿಲ್ಲ. ಹೋರಾಟ ರಾಜಕೀಯ ಸ್ವರೂಪ ಪಡೆಯುವುದನ್ನು ಹೀಗೆ ನಾನು ತಪ್ಪಿಸಿದೆ. ಮುಖಂಡರಿಗೂ ಮತ್ತು ಮುಖ್ಯವಾದ ವೃತ್ತಪತ್ರಿಕೆಗಳಿಗೂ ಆಗಾಗ ನಮ್ಮ

ಕಾರ್ಯದ ವರದಿಗಳನ್ನು ಕಳುಹಿಸುತ್ತಿದ್ದೆ. ಪ್ರಚಾರಕ್ಕಾಗಿಯಲ್ಲ., ವಿಷಯಗಳನ್ನು ತಿಳಿಸುವುದಕ್ಕಾಗಿ. ಕೊನೆಯ ಗುರಿ ರಾಜಕೀಯವಾಗಿದ್ದರೂ, ನಾವು ಯವುದಕ್ಕಾಗಿ ಹೋರಾಡುತ್ತೇವೆಯೋ ಆ ಕಾರ್ಯ ರಾಜಕೀಯವಲ್ಲದಿರುವಾಗ, ಅದಕ್ಕೆ ರಾಜಕೀಯ ಸ್ವರೂಪವನ್ನು ಕೊಡುವುದರಿಂದ ಅದು ಕೆಡುವುದು, ಅದನ್ನು ನಿಜಸ್ವರೂಪದ ಮಿತಿಯಲ್ಲಿಡುವುದು ಲಾಭವಾಗುವುದೆಂದೂ ನಾನು ಕಂಡಿದ್ದೆ. ಯಾವ ಕ್ಷೇತ್ರದಲ್ಲಾದರೂ ಸರಿಯೇ, ಜನತೆಯ ಸೇವೆಯನ್ನು ನಿಷ್ಕಾಮವಾಗಿ ಮಾಡಿದರೆ ಕೊನೆಯಲ್ಲಿ ದೇಶದ ರಾಜಕೀಯಕ್ಕೆ ಸಹಾಯವಾಗುವುದೆಂಬುದನ್ನು ಚಂಪಾರಣ್ಯ ಹೋರಾಟ ಸಿದ್ಧ ಮಾಡಿ ತೋರಿಸಿತು.

ಸಾಭಾರ
(ಆತ್ಮತಥೆಯಿಂದ)

ಸಂತಾಪ

ಪ್ರಗತಿ ಪರ ಚಿಂತಕ, ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಟಗಾರ, ವಿಡಂಬನ ಸಾಹಿತ್ಯಕಾರ ಮತ್ತು ಅಂಕಣಕಾರರಾಗಿದ್ದ ಎಚ್.ಎಲ್. ಕೇಶವಮೂರ್ತಿಯವರು ದೈವಧೀನರಾದರು. ಅವರಿಗೆ ಜನಪದ ವಿಚಾರದ ಸಂತಾಪ.

***

ಹಾಸನ ಜಿಲ್ಲಾ ಸರ್ವೋದಯ ಮಿತ್ರಮಂಡಳಿಯ ಸದಸ್ಯರಾಗಿ ಸಾರ್ವಜನಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ದೇಹವನ್ನು ಆಯುರ್ವೇದ ಆಸ್ಪತ್ರೆಗೆ ದಾನವಾಗಿ ಕೊಟ್ಟ ಶ್ರೀ ಡಿ. ಸುದರ್ಶನ್ ಅವರಿಗೆ ಸಂತಾಪಗಳು.

***

ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸುಮಾರು ಮೂರು ದಶಕಗಳ ಕಾಲ ಗಾಂಧೀ ವಿಚಾರ ಪ್ರಚಾರದಲ್ಲಿ ತೊಡಗಿದ್ದ ೯೪ ವರ್ಷದ ಹೊ॥ ಶ್ರೀನಿವಾಸಯ್ಯನವರ ನಿಧನಕ್ಕಾಗಿ ಜನಪದ ವಿಚಾರ ತನ್ನ ದುಂಖವನ್ನು ವ್ಯಕ್ತಪಡಿಸುತ್ತದೆ.

***

ಚಿತ್ರದುರ್ಗ ಜಿಲ್ಲಾ ಸರ್ವೋದಯ ಮಂಡಳಿಯ ಅಧ್ಯಕ್ಷರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದ ಮಧುರೆತಿಮ್ಮಾರೆಡ್ಡಿರವರು ತಮ್ಮ ೮೪ನೇ ವಯಸ್ಸಿನಲ್ಲಿ ತೀರಿಕೊಂಡರು. ಅವರ ನಿಧನಕ್ಕೆ ದುಃಖ ವ್ಯಕ್ತಪಡಿಸುತ್ತೇವೆ.

ಅಂತರ್-ಧರ್ಮೀಯ ಸಂಗೀತಗಾರರು

–ಶಿರೀಷ ಜೋಶಿ

ಸಂಗೀತ ಲೋಕದಲ್ಲಿ ಇತ್ತೀಚೆಗೆ ವಿವಾದವೊಂದು ಹುಟ್ಟಿಕೊಂಡು, ದೇಶದಾದ್ಯಂತ ಚರ್ಚೆಗೆ ಒಳಗಾಯಿತು. ಸುಹಾನಾ ಎಂಬ ಗಾಯಕಿ ಟಿ.ವಿ. ಚಾನೆಲ್ ಒಂದರಲ್ಲಿ ದೇವರನಾಮಗಳನ್ನು ಹಾಡಿದ ಬಗೆಗೆ ಧರ್ಮಾಂಧರು ಟೀಕೆ ಮಾಡಿದರು. ಈ ಪ್ರಕರಣದಲ್ಲಿ ಅನೇಕ ಮಹನೀಯರು ಸುಹಾನಾಳನ್ನು ಬೆಂಬಲಿಸಿದ್ದು ಸಂತಸದ ಸಂಗತಿ. ಸಂಗೀತ ಜ್ಯೋತಿಗೆ ಎಲ್ಲಿದೆ ಜಾತಿ? ಅದು ಎಲ್ಲ ಜಾತಿಯ ಮನೆಗಳಲ್ಲೂ ಬೆಳಕನ್ನು ನೀಡುವ ಜ್ಯೋತಿ.

ನಮ್ಮ ಭಾರತೀಯ ಸಂಗೀತ ಕ್ಷೇತ್ರ ಮೊದಲಿನಿಂದಲೂ ಭಾವೈಕ್ಯವನ್ನು ಪೋಷಿಸುತ್ತಾ ಬಂದಿರುವುದನ್ನು ಇತಿಹಾಸದ ಪುಟಗಳು ಸಾರಿ ಸಾರಿ ಹೇಳುತ್ತಿವೆ. ಸಂಗೀತದ ಅಭಿಮಾನಕ್ಕೆ ಧಕ್ಕೆ ಬಂದಾಗ ಅನೇಕ ಮುಸ್ಲಿಂ ಗಾಯಕರು ಸಂಗೀತದ ಪಕ್ಷವನ್ನು ವಹಿಸಿದ ಉದಾಹರಣೆಗಳಿವೆ. ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದ ನಂತರ ತಮ್ಮ ನೆಲೆಗಾಗಿ ಪಾಕಿಸ್ತಾನವನ್ನು ಆಯ್ಕೆ ಮಾಡಿಕೊಂಡ ಕಲಾವಿದ ಉಸ್ತಾದ್ ಬಡೇಗುಲಾಂ ಅಲಿಖಾನ್ ಸಾಹೇಬರು ಒಮ್ಮೆ ಕರಾಚಿಯಲ್ಲಿ ಕಾರ್ಯಕ್ರಮವನ್ನು ನೀಡುತ್ತಿದ್ದರು. ‘ಕನ್ಹಯ್ಯಾ ನೆ ಬಯಿಯಾ ಮರೋರಿ’ ಎಂಬ ಬಂದಿಶ್ ಅನ್ನು ಸೊಗಸಾಗಿ ಹಾಡುತ್ತಿರುವಾಗ ಪಾಕಿಸ್ತಾನದ ಅಧಿಕಾರಿಗಳು ಆ ಹಾಡಿನಲ್ಲಿನ ‘ಕನ್ಹಯ’ ಎಂಬ ಶಬ್ದವನ್ನು ಬಿಟ್ಟು ಹಾಡುವಂತೆ ಆದೇಶಿಸಿದರು. ‘ಕನ್ಹಯ’ ಎಂಬುದು ಕೃಷ್ಣನ ಹೆಸರು. ಇದನ್ನು ಕೇಳಿ ತಮ್ಮ ಕಾರ್ಯಕ್ರಮವನ್ನು ಮೊಟಕು ಗೊಳಿಸಿದ ಅಲಿಖಾನರು ತಕ್ಷಣ ತಮ್ಮನ್ನು ಭಾರತಕ್ಕೆ ಕಳುಹಿಸುವಂತೆ ಭಾರತದ ಆಗಿನ ರಾಯಭಾರಿಗೆ ದುಂಬಾಲು ಬಿದ್ದರು. ಇದನ್ನು ಅವರು ಪಾಕಿಸ್ತಾನದ ಅಧಿಕಾರಿಗಳಿಗೆ ತಿಳಿಸಿದಾಗ ಧಾವಿಸಿ ಬಂದ ಪಾಕಿಸ್ತಾನದ ಅಧಿಕಾರಿಗಳಿಗೆ ಉಸ್ತಾದರು ವಿವರಣೆ ನೀಡಿದ್ದು ಹೀಗೆ: ‘ನಾನು ದೇಶವನ್ನು ಬಿಡುತ್ತೇನೆಯೇ ವಿನಾ ಬಂದಿಶ್ ಅನ್ನು ಬದಲಿಸುವುದಿಲ್ಲ’. ಆಗ ಭಾರತಕ್ಕೆ ಮರಳಿದ ಉಸ್ತಾದರು ಕೊನೆಯವರೆಗೂ ಭಾರತದಲ್ಲಿಯೇ ಉಳಿದರು. ನಮ್ಮ ಕಲಾವಿದರು ಸಂಗೀತವನ್ನು ಆರಾಧಿಸಿದ ಬಗೆಯಿದು.

ಇಂಥ ಇನ್ನೂ ಕೆಲವು ಉದಾಹರಣೆಗಳ ಪಟ್ಟಿ ಇಲ್ಲಿದೆ. ವಿಜಯಪುರದ ದೊರೆ ಜಗದ್ಗುರು ಇಬ್ರಾಹಿಂ ಆದಿಲ್ ಷಾನು ಗಣಪತಿ, ಸರಸ್ವತಿ ಮೊದಲಾದ ದೇವತೆಗಳ ಸ್ತುತಿಪರ ಗೀತೆಗಳನ್ನು ರಚಿಸಿದ್ದಾನೆ. ಭೂಗಂಧರ್ವರೆಂದೇ ಖ್ಯಾತಿವೆತ್ತ ಉಸ್ತಾದ್ ರೆಹಮತ್ ಖಾನರು ಬಹಳಷ್ಟು ವರ್ಷಗಳ ಕಾಲ ಹುಬ್ಬಳ್ಳಿಯ ಸಿದ್ಧಾರೂಢರ ಮಠದಲ್ಲಿ ವಾಸವಾಗಿದ್ದರು. ಶಾಹೂ ಮಹಾರಾಜರ ಆಸ್ಥಾನದಲ್ಲಿದ್ದ ಉಸ್ತಾದ್ ಅಲ್ಲಾದಿಯಾ ಖಾನರು ತಾವು ಶಾಂಡಿಲ್ಯ ಗೋತ್ರದವರೆಂದು ಹೇಳಿ ಕೊಳ್ಳುತ್ತಿದ್ದರು ಮತ್ತು ಹಿಂದೂ ದೇವತೆಗಳನ್ನು ಸ್ತುತಿಸುವ ಅನೇಕ ಬಂದಿಶ್‌ಗಳು ಅವರ ಭಂಡಾರದಲ್ಲಿದ್ದವು. ಉಸ್ತಾದ್ ಬಿಸ್ಮಿಲ್ಲಾಖಾನರನ್ನು ಪಾಕಿಸ್ತಾನಕ್ಕೆ ಬರುವಂತೆ ಆಗ್ರಹಿಸಿದಾಗ, ‘ಕಾಶಿಯಲ್ಲಿನ ಗಂಗೆ ಮತ್ತು ವಿಶ್ವನಾಥ ಪಾಕಿಸ್ತಾನಕ್ಕೆ ಬಂದರೆ ನಾನೂ ಬರುತ್ತೇನೆ’ ಎಂದು ಹೇಳಿದರೆಂಬ ಸಂಗತಿ ಸಂಗೀತ ಲೋಕದಲ್ಲಿ ಜನ ಜನಿತವಾದುದು. ಕಿರಾಣಾ ಘರಾಣೆಯ ಆದ್ಯಪ್ರವರ್ತಕರಾದ ಉಸ್ತಾದ್ ಅಬ್ದುಲ್ ಕರೀಂಖಾನರು ಬ್ರಾಹ್ಮಣರಾದ ಸವಾಯಿ ಗಂಧರ್ವರಿಗೆ ನಿರ್ವಂಚನೆಯಿಂದ ಸಂಗೀತ

ದೀಕ್ಷೆ ನೀಡಿದರು. ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಗುರುಗಳಾದ ಉಸ್ತಾದ್ ಬುರ್ಜಿಖಾನರು ಮುಸ್ಲಿಂ ಧರ್ಮಕ್ಕೆ ಸೇರಿದವರು. ಪ್ರಖ್ಯಾತ ಸರೋದ್‌ವಾದಕ ಅಮ್ಜದ್ ಅಲಿಖಾನರ ತಂದೆ ಉಸ್ತಾದ್ ಹಾಫಿಜ್ ಖಾನರು, ಮನೆಬಿಟ್ಟು ಓಡಿಬಂದ ಪಂಡಿತ್ ಭೀಮಸೇನ ಜೋಶಿಯವರಿಗೆ ಗ್ವಾಲಿಯರ್‌ನಲ್ಲಿ ಆಶ್ರಯ ದೊರಕಿಸಲು ನೆರವಾದುದಲ್ಲದೆ ಅವರಿಗೆ ಅಪೂರ್ವವಾದ 'ಮಾರವಾ' ರಾಗವನ್ನು ಕಲ್ಪಿಸಿಕೊಟ್ಟರು. ಈ ಎಲ್ಲ ಪ್ರಕರಣಗಳಲ್ಲಿ 'ಜಾತಿ' ಅಥವಾ 'ಧರ್ಮಕಟ್ಟಳೆ' ಎಂಬುದು ಎಂದಿಗೂ ಸಂಗೀತಕ್ಕೆ ಅಡ್ಡಿಯಾಗಲಿಲ್ಲ ಎಂಬುದನ್ನು ಗಮನಿಸಬೇಕು.

ಇಸ್ಲಾಂ ಧರ್ಮದವರು ಮಾತ್ರವಲ್ಲ ಹಿಂದೂಗಳೂ ಮುಸ್ಲಿಂ ಕಲಾವಿದರನ್ನೂ ಅಷ್ಟೇ ಗೌರವದಿಂದ ನಡೆಸಿಕೊಂಡ ಉದಾಹರಣೆಗಳೂ ನಮ್ಮಲ್ಲಿವೆ. ಗಾನಯೋಗಿ ಪಂಚಾಕ್ಷರಿ ಗವಾಯಿಗಳಿಗೆ ಹಿಂದೂಸ್ತಾನಿ ಸಂಗೀತ ಶಿಕ್ಷಣವನ್ನು ಕೊಡಿಸಬೇಕೆಂಬ ಉದ್ದೇಶದಿಂದ ಹಾನಗಲ್ ಕುಮಾರಸ್ವಾಮಿಗಳು ಉಸ್ತಾದ್ ವಹೀದ್ ಖಾನರನ್ನು ಶಿವಯೋಗ ಮಂದಿರಕ್ಕೆ ಕರೆತಂದರು. ದಕ್ಷಿಣ ಏಷ್ಯಾದಲ್ಲಿಯೇ ಮೊದಲ ಬಾರಿಗೆ ಸರ್ಕಸ್ ಕಂಪನಿಯನ್ನು ಸ್ಥಾಪಿಸಿದ ಮತ್ತು ಕರ್ನಾಟಕದ ಏಕೈಕ ಧೃಪದ ಗಾಯಕ ವಿಜಯಪುರದ ಪಂಡಿತ್ ವಿಷ್ಣುಪಂಥ ಛತ್ರೆಯವರು ಭೂಗಂಧರ್ವ ರೆಹಮತ್ ಖಾನರಿಗೆ ಹಲವಾರು ವರ್ಷ ಆಶ್ರಯವನ್ನು ನೀಡಿದ್ದರು.

ಅನೇಕ ಮುಸ್ಲಿಂ ಗಾಯಕಿಯರೂ ಈ ಸಾಲಿನಲ್ಲಿ ನಿಲ್ಲುತ್ತಾರೆ. ಕರ್ನಾಟಕದ ಅಮೀರಬಾಯಿ ಕರ್ನಾಟಕಿ, ಗೋಹರಜಾನ್ ಕರ್ನಾಟಕಿ, ರೆಹಮಾನವ್ವ ಕಲಮನಿ, ಜುಬೇದಾಬಾಯಿ ಸವಣೂರ ಇವರೆಲ್ಲ ರಂಗಭೂಮಿಯಲ್ಲಿ ದೇವರನಾಮಗಳನ್ನು ಹಾಡಿದ್ದಾರೆ. ಗೋಹರ ಜಾನ್ ಕಲ್ಕತ್ತೆವಾಲಿ, ರೋಷನಾರಾಬೇಗಂ, ಬೇಗಂ ಅಖ್ತರ್, ಅಸಗರಿಬಾಯಿ ಹಾಗೂ ಸಮಕಾಲೀನ ಸಂಗೀತಗಾರ್ತಿ ಬೇಗಂ ಪರ್ವೀನ್ ಸುಲ್ತಾನಾ ಮೊದಲಾದವರೆಲ್ಲ ದೇವತೆಗಳ ಸ್ತುತಿಯನ್ನು ಹಾಡಿ ಜನಾನುರಾಗಿಗಳಾಗಿದ್ದಾರೆ.

ಸಂಗೀತ ಲೋಕದಲ್ಲಿ ಭಾವೈಕ್ಯದ ಪರಂಪರೆ ಈಗಲೂ ನಡೆದುಕೊಂಡು ಬಂದಿದೆ ಎಂಬುದು ಸಂತಸದ ಸಂಗತಿ. ಪ್ರಖ್ಯಾತ ಗಾಯಕರಾದ ರಶೀದ್ ಖಾನ್, ಬೆಂಗಳೂರಿನ ಫೈಯಾಜ್ ಖಾನ್ ಮೊದಲಾದವರು ಅನೇಕ ದೇವತಾ ಸ್ತುತಿಗಳನ್ನು ಹಾಡಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ರಂಗಭೂಮಿಯ ಸೇವೆ ಮಾಡುತ್ತಿರುವ ಗೆಳೆಯ ಝಕೀರ್ ನದಾಫ ಅವರು ಸವದತ್ತಿಯವರಗಿದ್ದು ಎಲ್ಲಮ್ಮನ ಭಕ್ತಿಗೀತೆಗಳ ಹತ್ತಾರು ಧ್ವನಿ ಸುರುಳಿಗಳಿಗೆ ದನಿಯಾಗಿದ್ದಾರೆ. ಹುಸೇನ ದಾಸರೆಂದೇ ಖ್ಯಾತರಾಗಿರುವ ರಾಯಚೂರಿನ ಹುಸೇನ್‌ಸಾಬ್, ದಾಸರ ಪದಗಳನ್ನು ಈಗಲೂ ಮಠ-ಮಂದಿರಗಳಲ್ಲಿ ಹಾಡುತ್ತಾರೆ. ಸಿನಿಮಾ ಸಂಗೀತದ ಮೊಹಮ್ಮದ್ ರಫಿ, ಎ.ಆರ್.ರೆಹಮಾನ್. ಸಲೀಂ-ಸುಲೈಮಾನ್ ಸಹ ಇದೇ ಕಾಯಕವನ್ನು ಮಾಡಿದ್ದಾರೆ. ಯಾರೂ ಇವರೆಲ್ಲರ ವಿರುದ್ಧ ದನಿ ಎತ್ತಿಲ್ಲ ಎಂಬುದು ನಮ್ಮ ಭಾವೈಕ್ಯ ಮತ್ತು ಕಲಾಪ್ರಿಯ ಪರಂಪರೆಗೆ ಸಾಕ್ಷಿಯಾಗಿದೆ.

ಸಂಗೀತ ಲೋಕದ ಭಾವೈಕ್ಯ ಪರಂಪರೆಯನ್ನು ಮುಂದುವರಿಸಬೇಕಾಗಿದೆ. ಜಾತಿಯ ದುರ್ಲೇಪವಾದರೆ ಸಂಗೀತ ಲೋಕವೂ ಕೆಟ್ಟು ಹೋಗುವುದರಲ್ಲಿ ಎರಡು ಮಾತಿಲ್ಲ. ಜಾತಿಬಡುಕತನವನ್ನು ದೂರವಿಟ್ಟು ಸಂಗೀತ ಲೋಕವನ್ನು ಪವಿತ್ರವಾಗಿಯೇ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ.

ಸಾಭಾರ

(ಪ್ರಜಾವಾಣಿ)

ಗಾಂಧಿ ಎಂಬ ಆಶಾಕಿರಣ

ಗೆಳೆಯರೊಂದಿಗೆ ಇತ್ತೀಚೆಗೆ ದೆಹಲಿಗೆ ಹೋಗಿದ್ದೆ. ಅಲ್ಲಿದ್ದ ನಾಲ್ಕು ದಿನಗಳಲ್ಲಿ, ಆ ನಗರದಲ್ಲಿರುವ ಹೆಚ್ಚೂ ಕಡಿಮೆ ಎಲ್ಲ ಸ್ಮಾರಕಗಳಿಗೂ ಹೋಗಿ ಬಂದೆ. ಆ ಸಂದರ್ಭದಲ್ಲಿ ನನಗಾದ ಆಶ್ಚರ್ಯವೆಂದರೆ, ಈ ಸ್ಮಾರಕಗಳಿಗೆ ಭೇಟಿ ಕೊಡುವ ಸಂದರ್ಶಕರ ಅತ್ಯಂತ ಹೆಚ್ಚು ಜನಸಂದಣಿ ಕಂಡದ್ದು ಗಾಂಧಿ ಸಮಾಧಿ ಇರುವ ರಾಜ್ ಘಾಟ್‌ನಲ್ಲಿ. ಇಳಿಸಂಜೆಯ ಹೊತ್ತಿನಲ್ಲೂ ಅಲ್ಲಿಗೆ ಭೇಟಿ ನೀಡುವವರ ಸಂಖ್ಯೆ ಗಣನೀಯವಾಗಿತ್ತು.

ಸಾರ್ವಜನಿಕ ಜೀವನದಲ್ಲಿ ಗಾಂಧಿ ಕಾಲ ಮುಗಿದಿದೆ ಎಂಬ ನಂಬಿಕೆ ಸರ್ವವ್ಯಾಪಿಯಾಗುತ್ತಿರುವ ಮತ್ತು ಇದಕ್ಕೆ ತಕ್ಕಂತೆ ರಾಷ್ಟ್ರ ರಾಜಕಾರಣವು ನಿರ್ಣಾಯಕ ತಿರುವೊಂದನ್ನು ತೆಗೆದುಕೊಳ್ಳುತ್ತಿರುವಂತೆ ತೋರುತ್ತಿರುವ ಈ ದಿನಗಳಲ್ಲಿ, ಗಾಂಧಿಗೆ ಗೌರವ ತೋರುವ ಜನರ ಈ ವಿಶೇಷ ಆಸಕ್ತಿ ಕುತೂಹಲಕರ ಸಂಗತಿಯೇ ಆಗಿದೆ. ಇಲ್ಲಿ ನಾನು ಕಂಡ ಇನ್ನೊಂದು ವಿಶೇಷ ಸಂಗತಿಯೆಂದರೆ, ರಾಜ್‌ಘಾಟ್‌ಗೆ ಭೇಟಿ ನೀಡುವ ಈ ಜನ ಸಮೂಹದಲ್ಲಿ, ಇತರ ಸ್ಮಾರಕಗಳ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಆಧುನಿಕ ದಿರಿಸು ಧರಿಸಿದ ಮೇಲ್ಮಧ್ಯಮ ಮತ್ತು ಪ್ರತಿಷ್ಠಿತ ವರ್ಗಕ್ಕೆ ಸೇರಿದವರಂತೆ ತೋರುವ ಜನ ಕಡಿಮೆ. ಭಾರತದ ಸಾಮಾನ್ಯ ಜನ, ಬಡಬಗ್ಗರು, ಆದಿವಾಸಿಗಳು, ಮಹಿಳೆಯರು ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚು.

ಇದರಿಂದ ಗೊತ್ತಾಗುವುದೇನೆಂದರೆ, ನಮ್ಮ ರಾಜಕಾರಣ ಗಾಂಧಿಯ ಚಿತ್ರವನ್ನು ಎಷ್ಟೇ ವಿರೂಪಗೊಳಿಸಿದರೂ, ನಮ್ಮ ಜನಮಾನಸದಲ್ಲಿ ನಾವು ಸರಳವಾಗಿ ಮತ್ತು ಸುಲಭವಾಗಿ ವಿವರಿಸಲಾಗದ ಯಾವುದೋ ಒಂದು ಆಳದ ಕಾರಣದಿಂದಾಗಿ ಗಾಂಧಿ ಇನ್ನೂ ಜೀವಂತವಿದ್ದಾರೆ. ಸಾಮಾನ್ಯ ಜನ ಅವರಲ್ಲಿ ಗೌರವ, ಶ್ರದ್ಧೆಗಳನ್ನಾಗಲೀ ಅಥವಾ ಪ್ರೀತಿ, ಆಸಕ್ತಿಗಳನ್ನಾಗಲೀ ಕಳೆದುಕೊಂಡಿಲ್ಲ. ಇಂದಿನ ಕಲುಷಿತ ರಾಜಕಾರಣ ಮತ್ತು ಸಾರ್ವಜನಿಕ ಜೀವನವನ್ನು ಗಾಂಧಿ ಚಿಂತನೆಗಳ ಮೂಲಕ ತಕ್ಕಮಟ್ಟಿಗಾದರೂ ಸಹನೀಯಗೊಳಿಸಿ ತಹಬಂದಿಗೆ ತರಬಹುದೆಂದು ನಂಬಿದವರಿಗೆ ಇಲ್ಲಿದೆ ಒಂದು ಆಶಾಕಿರಣ ಎಂದು, ಗಾಂಧಿ ಸಮಾಧಿಗೆ ಭೇಟಿಕೊಟ್ಟು ಹೊರಬರುತ್ತಿದ್ದ ಜನಸಮೂಹದ ಮುಖಚರ್ಯೆಗಳನ್ನು ಗಮನಿಸಿದಾಗ ನನಗನ್ನಿಸಿತು.

ಆದರೆ ಅದೇ ಸಮಯದಲ್ಲಿ, ಇಂದಿನ ಸವಾಲುಗಳನ್ನು ಎದುರಿಸಲು ಇಂದು ನಮಗೆ ಬೇಕಾದ ಗಾಂಧಿಯನ್ನು ಪುನರ್ ಅನ್ವೇಷಿಸಿಕೊಳ್ಳಲು ಅಧ್ಯಯನಶೀಲತೆ, ವಿವೇಕ, ಜಾಣ್ಮೆಬೇಕು. ಜೊತೆಗೇ ಗಾಂಧಿ ಯುಗದ ಜೀವನ ದೃಷ್ಟಿ ಮತ್ತು ಮೌಲ್ಯಗಳು, ಅರ್ಪಣಾ ಮನೋಭಾವ, ಸಂಘಟನಾಶೀಲತೆ, ಶ್ರದ್ಧೆ ಮತ್ತು ಶಿಸ್ತುಗಳ ಅಗತ್ಯವೂ ಇದೆ ಎಂದು ಅನ್ನಿಸಿದ್ದನ್ನೂ ಇಲ್ಲಿ ದಾಖಲಿಸಬೇಕು.

ಡಿ.ಎಸ್. ನಾಗಭೂಷಣ,

ಸರ್ವೋದಯ ಆಂದೋಲನ ಮುನ್ನಡೆ

೨೦೧೭ ಮಾರ್ಚ್ ೨೩ ಮತ್ತು ೨೪ ರಂದು ಬಿಹಾರ್ ರಾಜ್ಯದ ಚಂಪಾರಣ್ಯದಲ್ಲಿ ಅಖಿಲ ಭಾರತ ಸರ್ವೋದಯ ಮಂಡಲಿಯ ೮೫ನೇ ಅಧಿವೇಶನ ನೆರವೇರಿತು. ದೇಶಾದ್ಯಂತ ಇರುವ ರಾಜ್ಯ ಸರ್ವೋದಯ ಮಂಡಲಿಗಳ ಅಧ್ಯಕ್ಷರು, ಲೋಕಸೇವಕರು ಮತ್ತು ಸರ್ವೋದಯ ಮಿತ್ರರು ಹಾಗೂ ಅನೇಕ ಸರ್ವೋದಯ ಕಾರ್ಯಕರ್ತರು ಸಮಾವೇಶದಲ್ಲಿ ಹಾಜರಿದ್ದರು. ಈ ಸಮಾವೇಶದಲ್ಲಿ (ಸರ್ವಸೇವಾ ಸಂಘ) ಅಖಿಲ ಭಾರತ ಸರ್ವೋದಯ ಮಂಡಲಿಯ ಅಧ್ಯಕ್ಷರಾಗಿ ಎರಡನೇ ಅವಧಿಗೆ ಶ್ರೀ ಮಹಾದೇವ್ ವಿದ್ರೋಹಿ ಅವರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ೧೯೬೯ ರಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸರ್ವೋದಯ ಆಂದೋಲನದ ಯುವಸಂಘಟನೆಯಾದ ತರುಣ ಶಾಂತಿ ಸೇನೆಯಲ್ಲಿ ಸೇರ್ಪಡೆಗೊಂಡು, ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದರು. ೧೯೭೪ರಲ್ಲಿ ಲೋಕನಾಯಕ ಜಯಪ್ರಕಾಶನಾರಾಯಣರ ಆಹ್ವಾನಕ್ಕೆ ಮನ್ನಣೆ ಕೊಟ್ಟು ಕಾಲೇಜಿಗೆ ಬಹಿಷ್ಕಾರ ಹಾಕಿದರು. ಸಂಪೂರ್ಣಕ್ರಾಂತಿ ಆಂದೋಲನ ಮತ್ತು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅವರನ್ನು ೪ ಸಲ ಬಂಧಿಸಿ ಸಹಸ್ರ ಸಹರಸ ಕಾರಗೃಹ ಮತ್ತು ವಿಶೇಷ ಕೇಂದ್ರಿಯ ಕಾರಾಗೃಹ ಭಾಗಲಪುರದಲ್ಲಿ ಇಟ್ಟಿದ್ದರು. ಮಹಾದೇವ್‌ರವರು ದೇಶದ ಸರಕಾರದ ವಿರುದ್ಧ ವಿದ್ರೋಹದ ಕೆಲಸದಲ್ಲಿ ತೊಡಗಿದ್ದರಿಂದ ಅವರಿಗೆ 'ವಿದ್ರೋಹಿ' ಎಂಬ ಅಡ್ಡ ಹೆಸರು ಬಂದಿತು. ಆದ್ದರಿಂದ ಅಂದಿನಿಂದ ಮಹಾದೇವ್ ವಿದ್ರೋಹಿಯಾದರು. ಅವರು ನಿಷ್ಠಾಪೂರ್ವಕವಾಗಿ ಯುವ ಸಂಘರ್ಷವಾಹಿನಿ ಮತ್ತು ಸಂಪೂರ್ಣಕ್ರಾಂತಿ ಯುವಸಂಗಮದ ನೇತೃತ್ವ ನಿರ್ವಹಿಸಿದರು. ೨೦೧೪ ರಲ್ಲಿ ಸರ್ವಸೇವಾಸಂಘದ ಅಧ್ಯಕ್ಷರಾಗಿ ಆಯ್ಕೆಯಾಗುವ ಮೊದಲು ಅವರು ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಪ್ರಬಂಧಕ ಟ್ರಸ್ಟಿಂಯಾಗಿ ತಮ್ಮ ಹೊಣೆಗಾರಿಕೆಯನ್ನು ಸಫಲತಾಪೂರ್ವಕವಾಗಿ ನಿರ್ವಹಿಸಿದ್ದರು.

***

೨೦೧೯ ಅಕ್ಟೋಬರ್ ೨೦ ರಿಂದ ೨ ಅಥವಾ ಜನವರಿ ೩೦ ರವರೆಗೆ ಮಹಾತ್ಮಗಾಂಧೀಜಿಯವರ ೧೫೦ನೇ ವರ್ಷಾಚರಣೆಯನ್ನು ದೇಶದಾದ್ಯಂತ "ಶತಕೋತ್ತರ ಸ್ವರ್ಣಜಯಂತಿ"ಯನ್ನಾಗಿ ಆಚರಿಸಲು

ಅಖಿಲಭಾರತ ಸರ್ವೋದಯ ಮಂಡಲಿ ತೀರ್ಮಾನಿಸಿದೆ. ೧೫೦ನೇ ವರ್ಷದ ದಿನಾಚರಣೆಯನ್ನು ಆಚರಿಸುವ ಕಾರ್ಯಕ್ರಮದ ಬಗ್ಗೆ ತೀರ್ಮಾನ ಕೈಗೊಳ್ಳಲು ೨೦೧೭ ಫೆಬ್ರವರಿ ೨೧ ಮತ್ತು ೨೨ ರಂದು ಸೇವಾಗ್ರಾಮ ಆಶ್ರಮದಲ್ಲಿ ಕಾರ್ಯಕರ್ತರ ಸಮಾವೇಶ ನಡೆಯಿತು. ಆ ಸಮಾವೇಶದಲ್ಲಿ ಛತ್ತೀಸ್‌ಘಡ, ಉತ್ತರಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಬಿಹಾರ್, ದಿಲ್ಲಿ, ತಮಿಳುನಾಡು, ಪಡುಚೇರಿ, ಕೇರಳ, ಬಂಗಾಲ, ತೆಲಂಗಾಣ ಮತ್ತು ಆಂಧ್ರ ಮುಂತಾದ ೧೪ ರಾಜ್ಯಗಳ ಸರ್ವೋದಯ ಕಾರ್ಯಕರ್ತರು ಹಾಜರಿದ್ದರು. ಸುಮಾರು ೩೪೯ ಪ್ರತಿನಿಧಿಗಳು ಉಪಸ್ಥಿತರಿದ್ದರು. ಉಪಸ್ಥಿತರಿದ್ದವರಲ್ಲಿ ಅನೇಕರು ಸಕ್ರೀಯವಾಗಿ ಚರ್ಚೆಯಲ್ಲಿ ಭಾಗವಹಿಸಿದರು. ವರ್ಷಾಚರಣೆಗೆ ಪೂರ್ವ ನಿಯೋಜಿತ ಅಥವಾ ಸಿದ್ಧ ಕಾರ್ಯಕ್ರಮವನ್ನು ತಯಾರಿಸದೇ ಎಲ್ಲರ ಸಹಭಾಗಿತ್ವದಿಂದ ಸ್ಥಾನೀಯವಾಗಿ ವರ್ಷಾಚರಣೆ ನಡೆಯುವುದು ಸೂಕ್ತವೆಂದು ಅಭಿಪ್ರಾಯ ಪಡಲಾಯಿತು.

ಕರ್ನಾಟಕ ರಾಜ್ಯದಲ್ಲಿಯ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಗಳು ತಮ್ಮ ತಮ್ಮ ಜಿಲ್ಲೆಯಲ್ಲಿ ಬಾಪು ಶತಕೋತ್ತರ ಸ್ವರ್ಣಜಯಂತಿ ವರ್ಷದ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜದ ಎಲ್ಲಾ ವರ್ಗದ ಜನರ ಸಹಕಾರದೊಂದಿಗೆ ನಡೆಸಲು ಪ್ರಯತ್ನಿಸುವ ಸಂಕಲ್ಪ ಮಾಡಬೇಕು.

ಅಖಿಲ ಭಾರತ ಸರ್ವೋದಯ ಮಂಡಳಿಯ ಕಾರ್ಯಕಾರಿ ಸಭೆಯು ೨೦೧೭ ಜೂಲೈ ೨ ಮತ್ತು ೩ನೇ ದಿನಾಂಕಗಳಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಮಹಾವೀರ್ ವಿದ್ರೋಹಿಯವರ ಅಧ್ಯಕ್ಷತೆಯಲ್ಲಿ ವಾರ್ಧಾ ಜಿಲ್ಲೆಯ ಸೇವಾಗ್ರಾಮ ಆಶ್ರಮದಲ್ಲಿ ನಡೆಯುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ವೋದಯ ಮಂಡಲಿಯುವರನ್ನು ಸಂಪರ್ಕಿಸಬಹುದು. – ೯೧೪೧೭೦೦೮೧೨

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್ ಕಳೆದ ೫೦ ವರ್ಷಗಳಿಂದ ಖಾದಿ ಕೆಲಸದಲ್ಲಿ ತೊಡಗಿದೆ. ಉತ್ಪಾದನೆ, ಮಾರಾಟ ಮತ್ತು ಸಿದ್ಧ ಬಟ್ಟೆಗಳ ತಯರಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿದೆ. ಸುಮಾರು ೧೫ ಜನರು ಕಾರ್ಯನಿರ್ವಹಿಸುತ್ತಿದ್ದಾರೆ. ಖಾದಿ ವಿಚಾರದಲ್ಲಿ ನಂಬಿಕೆ ಇಟ್ಟಿರುವ ಅನೇಕ ಮಾನ್ಯರು ಟ್ರಸ್ಟಿನ ಖಾದಿ ಉತ್ಪಾದನೆಯನ್ನು ಖುದ್ದಾಗಿ ನೋಡಿ ಹೋಗುತ್ತಿದ್ದಾರೆ. ಖಾದಿ ವಿಚಾರದಲ್ಲಿ ಆಸಕ್ತಿ ಇರುವಂಥ ಕೆಲವರಿಗೆ ಏಪ್ರಿಲ್ ೧೪ ಮತ್ತು ೧೬ ರಂದು ಚರಖದಲ್ಲಿ ನೂಲು ತೆಗೆಯುವ ಶಿಕ್ಷಣದ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ೧೩ ಆಸಕ್ತರು ಕಾರ್ಯಗಾರದಲ್ಲಿ ಭಾಗವಹಿಸಿದ್ದರು. ಬೆಂಗಳೂರು. ಕೊಯಂಬತ್ತೂರು ಮತ್ತು ಇನ್ನೂ ಬೇರೆ ಸ್ಥಳಗಳಿಂದ ಬಂದಿದ್ದರು. ತರಬೇತಿಯನ್ನು ಮಾಧವ್ ಸಹಸ್ರ ಬುದ್ಧೆ ಮತ್ತು ಅವರ ಪತ್ನಿ ನೀಲಿಮ ನಡೆಸಿ ಕೊಟ್ಟರು. ಕಾರ್ಯಗಾರವನ್ನು ಉದ್ದೇಶಿಸಿ ಪ್ರೊ॥ ವಿ.ಎಸ್. ಶ್ರೀಧರ್ ರವರು, ಡಿ.ಎಚ್ ಲಾರೆನ್ಸ್

ಕವಿಯ ದಿ ವರ್ಡ್ ಆಫ್ ದಿ ವರ್ಕ್ ಎಂಬ ಕವನವನ್ನು ಕುರಿತು ಮಾತನಾಡಿ ನೂಲುಗಾರಿಕೆ ಯಾವ ರೀತಿ ಕವಿಯ ವಿಚಾರಗಳಿಗೆ ಹತ್ತಿರವಾಗಿದೆ ಎಂಬುದನ್ನು ಸೊಗಸಾಗಿ ತಿಳಿಸಿದರು. ಈ ಮೊದಲು ಕಾರ್ಯಗಾರವನ್ನು ಉದ್ಘಾಟಿಸಿ ಸುರೇಂದ್ರ ಕೌಲಗಿರವರು ಪ್ರಸ್ತುತದಲ್ಲಿ ನೂಲುಗಾರಿಕೆಯ ಹಿಂದಿರುವ ಚಿಂತನೆಯ ಮಹತ್ವವನ್ನು ಮತ್ತು ಅಗತ್ಯವನ್ನು ತಿಳಿಸಿ ಉದ್ಘಾಟಿಸಿದರು. ಸಂತೋಷ್ ಕೌಲಗಿರವರು ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಗಾರದ ಅವಧಿಯಲ್ಲಿ ಕಲಿಕೆಗಾರರು ತೆಗೆದ ನೂಲನ್ನೆ ಅವರ ಎದುರಿನಲ್ಲಿ ನೇಯ್ಗೆ ಮಾಡಿ, ಸಿದ್ಧ ಮಾಡಿದ ಖಾದಿಯನ್ನು ತೋರಿಸಲಾಯಿತು. ತಮ್ಮ ನೂಲಿನಿಂದ ತಯಾರಾದ ಬಟ್ಟೆಯನ್ನು ನೋಡಿ ರೋಮಾಂಚಿತಗೊಂಡರು ಮತ್ತು ನಿತ್ಯ ಒಳ್ಳೆಯ ನೂಲನ್ನು ತೆಗೆಯುವ ಅಭ್ಯಾಸ ಮಾಡುವುದಾಗಿ ಸಂಕಲ್ಪಿಸಿದರು.

***

ಬೆಂಗಳೂರಿನ ಸಂಚಾರಿ ರಂಗಭೂಮಿ ತಂಡದವರು ಜನಪದ ಸೇವಾ ಟ್ರಸ್ಟ್ ಹೊಸ ಜೀವನ ದಾರಿ ಕೇಂದ್ರದಲ್ಲಿ ೧೫ ದಿನಗಳ ಬೇಸಿಗೆ ಶಿಬಿರವನ್ನು ನಡೆಸಿದರು. ೫೦ ಶಾಲಾ ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದಲ್ಲಿ ವಿವಿಧ ಬಗೆಯ ಕ್ರಿಯಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮುಸ್ಸಂಜೆಯ ಬೆಳಕಿನಲ್ಲಿ.....೬

– ಸುರೇಂದ್ರ ಕೌಲಗಿ

ಹೇವಿಳಂಬಿ ಸಂವತ್ಸರದಲ್ಲಿ ನಡೆದ ಶ್ರೀ ವೈರಮುಡಿ ಮಹೋತ್ಸವ ನನ್ನ ಪಾಲಿಗೆ ೫೮ನೇ ವರ್ಷದ್ದು. ನನ್ನ ೨೫ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ವೈರಮುಡಿ ಮಹೋತ್ಸವ ಮತ್ತು ಜಾತ್ರೆಯನ್ನು ನೋಡಿದ್ದು. ಈಗ ೮೪ನೇ ವಯಸ್ಸಿನಲ್ಲಿ ಪುನಃ ಆ ಮಹೋತ್ಸವವನ್ನು ನೋಡುವ ಸುಸಂದಿ ಸಿಕ್ಕಿದ್ದಕ್ಕಾಗಿ ನನಿಗೆ ಸಂತೋಷವಾಗಿದೆ. ಭವಿಷ್ಯದಲ್ಲಿ ಎಷ್ಟು ವರ್ಷ ಉತ್ಸಹ ನೋಡುತ್ತೇನೋ ಎಂಬುದು ಗೊತ್ತಿಲ್ಲ, ಆದ್ದರಿಂದ ೨೦೧೭ ರ ವೈರಮುಡಿ ಉತ್ಸವವನ್ನು ಕಣ್ಣು ಮತ್ತು ಮನ ತುಂಬಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಪಟ್ಟೆ. ಊರು ತುಂಬಾ ಭಕ್ತಾಧಿಗಳು ಉತ್ಸಾಹದಿಂದ ಮತ್ತು ವಿಶೇಷ ಕಾತುರತೆಯಿಂದ ಓಡಾಡುತ್ತಿದ್ದುದನ್ನು ನೋಡುವುದೇ ಒಂದು ಹರ್ಷದಾಯಕ ಸಂಗತಿ. ಬಂದಂಥಹ ಭಕ್ತರಲ್ಲಿ ಹೆಚ್ಚಾಗಿ ವಯಸ್ಸಾದ ಮಹಿಳೆಯರೇ ಹೆಚ್ಚಿಗೆ ಇದ್ದಂತೆ ಇತ್ತು, ಪುರುಷರೂ ಇದ್ದರು. ಒಟ್ಟಾರೆ ಚಿಕ್ಕ ಪ್ರಾಯದವರಿಗಿಂತ ಹಿರಿಯ ಭಕ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ದೇವರು ಮತ್ತು ಭಕ್ತಿ ಮುಂತಾದ ವಿಷಯಗಳು ಬಿಸಿರಕ್ತದವರಿಗೆ ನಗಣ್ಯ, ವಯಸ್ಸಾದವರಿಗೆ ಬಹುಗಣ್ಯ ವಿಷಯವಾಗಿರುವುದೆ ಇದಕ್ಕೆ ಕಾರಣವಿರಬಹುದು. ಕಾಲಾಕ್ರಮೇಣ ಇಂದಿನ ಯುವಕರು ಮುಂದಿನ ವರ್ಷಗಳ ಜಾತ್ರೆಯಲ್ಲಿ ವೃದ್ಧಭಕ್ತರಾಗಿ ಬರಬಹುದು. ಅಂತೂ ಹಳೆಯ ನೀರು ಹೋಗಿ ಹೊಸ ನೀರು ಪ್ರವಹಿಸುವಂತೆ, ಭಕ್ತರ ಸಮೂಹವೂ ಬದಲಾಗುತ್ತಿರುತ್ತದೆ. ಬೇರೆ ಊರುಗಳ ಜಾತ್ರೆಗಿಂತ ಮೇಲುಕೋಟೆಯ ವೈರಮುಡಿ ಜಾತ್ರೆಯು ಒಂದು ವಿಶೇಷತೆಯನ್ನು ಹೊಂದಿದೆ. ಬೇರೆಲ್ಲಾ ಜಾತ್ರೆಗಳು ಹೆಚ್ಚಾಗಿ ಪ್ರಾದೇಶಿಕವಾಗಿದ್ದರೆ, ಮೇಲುಕೋಟೆಯ ಜಾತ್ರೆಯು ರಾಷ್ಟ್ರೀಯ ಜಾತ್ರೆಯಾಗಿರುತ್ತದೆ. ಏಕೆಂದರೆ ಜಾತ್ರೆಯಲ್ಲಿ ಪಾಲ್ಗೊಳ್ಳಲು ನೆರೆರಾಜ್ಯಗಳಾದ ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದ ನೂರಾರು ಭಕ್ತರು ಬರುತ್ತಾರೆ. ಕೆಲವೊಂದು ಸಲ ದೂರದ ಅಯೋಧ್ಯೆಯಿಂದಲೂ ಬರುತ್ತಾರೆ. ಆಗ ಮೇಲುಕೋಟೆಯ ಜಾತ್ರೆಯಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣಬಹುದಾಗಿದೆ. ದಕ್ಷಿಣ ಭಾರತದಿಂದ ಬರುವ ಭಕ್ತಾದಿಗಳು ಉಷ್ಣವಲಯದವರಾಗಿರುವುದರಿಂದ ಅವರು ಬರಿ ಮೈಯಲ್ಲಿ ಓಡಾಡುತ್ತಿರುತ್ತಾರೆ. ತಮ್ಮ ರಟ್ಟೆಗಳ ಮೇಲೆ, ಎದೆಯ ಮೇಲೆ ಮತ್ತು ಹಣೆಯ ಮೇಲೆ ಚೆಲುವನಾರಾಯಣಸ್ವಾಮಿ ಧರಿಸಿರುವ ನಾಮ ಹಾಕಿಕೊಂಡಿರುತ್ತಾರೆ. ಅದೇ ಹೊತ್ತಿಗೆ ಆಧುನಿಕ ಕಾಲದ ಹುಡುಗಿಯರು ನವೀನ ರೀತಿಯ ಪೋಷಾಕು ಧರಿಸಿ, ವಿಶೇಷವಾಗಿ ಸಿನಿಮಾಗಳಲ್ಲಿ ನಟಿಯರು ಮತ್ತು

ವೃತ್ಯಗಾರ್ತಿಯರೂ ಧರಿಸುವಂಥ ಪೋಷಾಕುಧರಿಸಿ ನೆಮ್ಮದಿಯಿಂದ ಓಡಾಡುತ್ತಿರುತ್ತಾರೆ. ಕೆಲವು ಯುವತಿಯರಂತೂ ಬಿಗಿ ಬಟ್ಟೆ ಧರಿಸಿಕೊಂಡೆ ನಿಸ್ಸಂಕೋಚಕವಾಗಿ ಓಡಾಡುತ್ತಿರುತ್ತಾರೆ. ಡೊಳ್ಳು ಹೊಟ್ಟೆಯ ಸ್ತ್ರೀ–ಪುರುಷ ಭಕ್ತಾದಿಗಳು ಹೆಚ್ಚಾಗಿ ಕಾಣುತ್ತಾರೆ.

ಈ ವರ್ಷ ಬೇರೆಲ್ಲಾ ವರ್ಷಗಳಿಗಿಂತ ಹೆಚ್ಚಿನ ರೀತಿಯಲ್ಲಿ ಊರನ್ನು ವಿದ್ಯುತ್‌ದೀಪದಿಂದ ಬೆಳಗಿಸಲಾಗಿತ್ತು. ಸುಮಾರು ಐವತ್ತು ವರ್ಷಗಳ ಹಿಂದಿನ ಜಾತ್ರೆಗೂ ಮತ್ತು ಈಗಿನ ಜಾತ್ರೆಗೂ ಬಹುದೊಡ್ಡ ವ್ಯತ್ಯಾಸವೆನೆಂದರೇ ಆಗ ಜಾತ್ರೆಗೆ ಬಂದವರು ವಿವಿಧ ಧರ್ಮಛತ್ರಗಳಲ್ಲಿ ಒಂದು ವಾರವಾದರೂ ತಂಗಿರುತ್ತಿದ್ದರು. ಜಾತ್ರೆಯ ಪ್ರಯುಕ್ತ ನಡೆಯುವ ವಿವಿಧ ಬಗೆಯ ಉತ್ಸವಗಳನ್ನೆಲ್ಲ ನೋಡಿಕೊಂಡು, ಅವುಗಳಲ್ಲಿ ಭಾಗಿಯಾಗಿ ಕೃತಕೃತ್ಯತೆಯ ಭಾವದಿಂದ ಮರಳಿ ಊರಿಗೆ ಹೋಗುತ್ತಿದ್ದರು. ಯಾವುದೇ ಬೇಸರವಿಲ್ಲದೆ ಮುಂದಿನ ವರ್ಷದ ಜಾತ್ರೆಗೆ ಪುನಃ ಬರುವ ಮನೋಸಿದ್ಧತೆಯಿಂದಲೇ ಹೋಗುತ್ತಿದ್ದರು. ಆದರೆ ಈಗ ಜಾತ್ರೆ ಕೇವಲ ಒಂದು ದಿನದ ಜಾತ್ರೆಯಾಗಿ ರೂಪಾಂತರಗೊಂಡಿದೆ. ವೈರಮುಡಿ ಬ್ರಹ್ಮಮಹೋತ್ಸವದ ಮಧ್ಯಾಹ್ನ ಬಂದು ಮಾರಾನೆ ದಿನ ನಸುಕಿನ ವೇಳೆಯೇ ತಮ್ಮ ತಮ್ಮ ಊರಿಗೆ ದೌಡಾಯಿಸಿ ಬಿಡುತ್ತಾರೆ. ಆದ್ದರಿಂದ ಇಂದಿನ ಜಾತ್ರೆಯ ಸಮಯದಲ್ಲಿ ಅಸಂಖ್ಯಾತ ಕಾರುಗಳಿಗಾಗಿ, ಬಸ್ಸುಗಳಿಗಾಗಿ ಮತ್ತು ದ್ವಿಚಕ್ರವಾಹನಗಳಿಗಾಗಿ, ಸ್ಥಳ ಒದಗಿಸುವುದೇ ದೊಡ್ಡ ಸಮಸ್ಯೆಯಾಗಿರುತ್ತದೆ.

ಆಧುನಿಕತೆಯ ಪ್ರಭಾವದಿಂದಾಗಿ ನಮ್ಮದೆಲ್ಲವನ್ನು ಕಳೆದುಕೊಳ್ಳುತ್ತಿರುವುದಕ್ಕೆ ವೈರಮುಡಿ ಜಾತ್ರೆಯೂ ಒಂದು ಉದಾಹರಣೆಯಾಗಿದೆ. ಇದಕ್ಕೆ ರೂಪಕವಾಗಿ ಮೇಲುಕೋಟೆಯ ಕೆರೆಯನ್ನೆ ದುಷ್ಟಾಂತವಾಗಿ ಹೇಳಬಹುದೇನೋ. ಐವತ್ತು ವರ್ಷಗಳ ಹಿಂದೆ ನೀರಿನಿಂದ ತುಂಬಿರುತ್ತಿದ್ದ ಮತ್ತು ಮಳೆಗಾಲದಲ್ಲಿ ಕೆರೆಗೆ ಕೋಡಿ ಬೀಳುತ್ತಿದ್ದ ಆ ದಳವಾಯಿ ಕೆರೆ ತನ್ನ ನೀರಿನ ಸಂಗ್ರಹವನ್ನು ಬಹಳಷ್ಟು ಕಳೆದುಕೊಂಡಿದೆ. ಅದರ ಒಡಲಲ್ಲಿರುವ ಅನೇಕ ಸ್ವರೂಪದ ಬಂಡೆಗಳು ನಗ್ನವಾಗಿ ಕಾಣಿಸಿಕೊಳ್ಳುತ್ತಿವೆ. ಜಾತ್ರೆಯ ಕಾಲದಲ್ಲಿ ಭಕ್ತಾದಿಗಳಿಗೆ ದೊಡ್ಡ ಆಸರೆಯಾಗಿದ್ದ ಕೆರೆಯಲ್ಲಿ ಇಂದೂ ಬೋರ್ವೆಲ್ ಕೊರೆದು ಊರಿಗೆ ನೀರು ಪೂರೈಸುವ ತಾಣವಾಗಿದೆ. ಆ ಕೆರೆಯಲ್ಲಿ ಕನ್ನಡದ ಹೊರ ಕವಿ ಪು.ತಿ.ನ ರವರು, ಸಾಹಿತಿ ಗೋರೂರು ರಾಮಸ್ವಾಮಿ ಅಯ್ಯಂಗಾರ್, ಅನೇಕ ವಿದ್ವಾಂಸರು ಈಜಾಡಿ ತಮ್ಮ ಬಟ್ಟೆ ಒಗಿಯುತ್ತಾ ಹರಟೆಹೊಡಿಯುತ್ತಾ ನಗುತ್ತ ಸಂತೋಷಪಡುತ್ತಿದ್ದ ಈಗ ಆ ಕೆರೆಯುನ್ನು ನೋಡಿದಾಗ ಅನಾಥವಾಗಿದೆಯೆಂದೆನಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಪಿ.ಶ್ರೀನಿವಾಸ – ಬೆಂಗಳೂರು

ಶ್ರೀ ಶ್ರೀಧರ್ ಟಿ.ಎಸ್ – ಬೆಂಗಳೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ತೇರುಲಿಂಗಪ್ಪ ಸಿ. – ಬೆಂಗಳೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ~~ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು~~ ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ಚಂದಾದಾರರಲ್ಲಿ ವಿನಂತಿ:–

"ಜನಪದ ವಿಚಾರ" ಪ್ರತಿ ತಿಂಗಳು ೩೦ನೇ ತಾರೀಖು ಅಂಚೆಗೆ ಹೋಗುತ್ತದೆ. ತಿಂಗಳ ಒಂದು ವಾರದಲ್ಲಿ ಪತ್ರಿಕೆ ತಲುಪದಿದ್ದರೆ ಕೂಡಲೆ ತಿಳಿಸಿ –೯೧೪೧೭೦೦೮೧೨

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237